# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA




ಸಂಪುಟ:01 Volume:01 • ಸಂಚಿಕೆ:337 Issue:337 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 11.06.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2




# ಮನೆಗೆ ನುಗ್ಗಿದ ಕಲ್ಲುಗುಂಡು, ತಪ್ಪಿದ ಅನಾಹುತ ಸ್ವಾಭಿಮಾನಿ ಬಡ ಮಹಿಳೆಗೆಂದು ಸೂರು?

## ಬಟ್ಟೆ ತೊಳೆಯಲು ಹೋಗಿದ್ದ ವೇಳೆ ಮನೆಯೊಳಕ್ಕೆ ಜಾರಿದ ಗುಂಡು | ಮಳೆ, ಗಾಳಿ ಚಳಿಯಲ್ಲೆ ಮೈಮುದುರಿಕೊಂಡು ಕುಳಿತ ಹೆಣ್ಣುಮಕ್ಕಳು ದಶಕಗಳಿಂದ ಕಲ್ಲುಗುಂಡಿನಾಸರೆಯಲ್ಲೇ ಬದುಕು | ತಾಯಿ ನಾಲ್ಕು ಹೆಣ್ಣು ಮಕ್ಕಳ ಹಸಿವು ತಣಿಸಲು ಮನೆ ಮನೆ ಮುಸುರಿ ಕೆಲಸ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಹಂಪೆಯಲ್ಲಿ ಭಾನುವಾರ ಸುರಿದ ಮಳೆಗೆ ಬೃಹತ್ ಕಲ್ಲಿನ ಗುಂಡೊಂದು ಜಾರಿ ಮನೆಗೆ ನುಗ್ಗಿದೆ. ಬಟ್ಟೆ ತೊಳೆಯಲು ಕಾಲುವೆಗೆ ತನ್ನ ಮಕ್ಕಳ ಸಮೇತ ತಾಯಿ ತೆರಳಿದ್ದರಿಂದ ಭಾರಿ ಅನಾಹುತ ತಪ್ಪಿದೆ. ನಾಲ್ಕು ಹೆಣ್ಣುಮಕ್ಕಳ ಜೀವ ಉಳಿದಿದ್ದು, ಮಳೆ, ಗಾಳಿ, ಚಳಿ ಎನ್ನದೆ ಇಡೀ ಕುಟುಂಬವು ಬಯಲಲ್ಲೆ ಹಗಲಿರಳು ಮೈಮುದುರಿಕೊಂಡು ದಿನದೂಡುತ್ತಿದ್ದಾರೆ. ಅವಘಡ ಸಂಭವಿಸಿ ದಿನ ಕಳೆದರೂ ಯಾವ ಅಧಿಕಾರಿಗಳು, ಜನಪ್ರತಿನಿಧಿಗಳು ಅವರತ್ತ ಹೋಗದಿರುವುದಕ್ಕೆ ಇಡೀ ಕುಟುಂಬ ಕಣ್ಣೀರುಡುತ್ತಿದೆ. ಗಂಡ ವಿಧಿವಶವಾದ ನಂತರವೂ ನಾಲ್ಕು ಹೆಣ್ಣು ಮಕ್ಕಳನ್ನು ಮುಸುರಿ ಕೆಲಸ ಮಾಡಿ ಸಲಹುತ್ತಿರುವ ಈ ಕುಟುಂಬದ ತಾಯಿಯ ಕಣ್ಣೀರು ಕೊನೆಗೊಳಿಸುವರಾರು? ಎನ್ನುವಂತಾಗಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮಲಪನಹಗುಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸ ಹಂಪೆಯ ಕುಟುಂಬವೊಂದು ಸೂರಿಗಾಗಿ ದಶಕಗಳಿಂದ, ಮನೆಗಾಗಿ ಅಧಿಕಾರಿಗಳತ್ತ ಅಲೆದಲೆದು ಸುಸ್ತಾಗಿದ್ದಾರೆ. ಮುಸುರಿ ಕೆಲಸ ಮಾಡಿದರೆ ಮಕ್ಕಳ ಹೊಟ್ಟೆಗಿಷ್ಟು ಅನ್ನ, ತೊಡಲು ಬಟ್ಟೆ ದೊರೆಯುತ್ತಿದೆ. ಮನೆಗೆಲಸಕ್ಕೆ ಹೋಗದಿದ್ದರೆ, ಮಕ್ಕಳ ಹಸಿವು ತಣಿಸುವವರಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ, ಹಂಪಿ ಅಭಿವೃದ್ಧಿ ಪ್ರಾಧಿಕಾರಕ್ಕೆ, ಅನೇಕ ಬಾರಿ ಮನವಿ ಮಾಡಿಕೊಂಡರೂ ಪ್ರಯೋಜನವಿಲ್ಲದಂತಾಗಿದೆ.

ಹಂಪಿ ಪ್ರದೇಶದಲ್ಲಿದ್ದ ಜನರನ್ನು ಖಾಲಿ ಮಾಡಿಸಿ, ಕಡ್ಡಿರಾಂಪುರ ಗ್ರಾಮದ ಪಶ್ಚಿಮದಲ್ಲಿರುವ ಕಲ್ಲುಬಂಡೆಯ ಹೊಸಹಂಪೆ ಪ್ರದೇಶದಲ್ಲಿ 300 ಕ್ಕೂ ಅಧಿಕ ಜನರಿಗೆ, ಹಂಪಿ ಅಭಿವೃದ್ಧಿ ಪ್ರಾಧಿಕಾರ ನಿವೇಶನ ಒದಗಿಸಿದೆ. ಈ ಪ್ರದೇಶದ ತೆರಿಗೆ ಸಂಗ್ರಹಿಸುತ್ತಿರುವ ಮಲಪನಗುಡಿ ಗ್ರಾಪಂ ಅಧಿಕಾರಿಗಳು ಅಭಿವೃದ್ಧಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಎಡವುತ್ತಿದ್ದಾರೆ ಎಂಬ ಗಂಭೀರ ಆರೋಗಳು ದಟ್ಟವಾಗಿವೆ. ದಶಕ ಕಳೆದರೂ ಗ್ರಾಪಂ ಅಧಿಕಾರಿಗಳ ಕಣ್ಣಿಗೂ ನಿವೇಶನ ವಂಚಿತ ಕುಟುಂಬ ಕಾಣದಿರುವುದು ಅವರ ಆಡಳಿತ ವೈಖರಿಗೆ ಕನ್ನಡಿಯಂತಿದೆ.









ನಿರಾಶ್ರಿತೆ ರೇಖಾ ಹರಿಜನ ಅವರು ಪತ್ರಿಕೆಯೊಂದಿಗೆ ತಮ್ಮ ಅಳಲು ತೋಡಿಕೊಂಡಿದ್ದಾರೆ. ಪತಿ ನಾಲ್ಕು ವರ್ಷದ ಹಿಂದೆ ವಿಧಿವಶವಾಗಿದ್ದಾರೆ. ನಮ್ಮ ನಾಲ್ಕು ಹೆಣ್ಣು ಮಕ್ಕಳ ಜವಾಬ್ದಾರಿ ನನ್ನ ಮೇಲಿದ್ದು, ಮಕ್ಕಳನ್ನು ಸಾಕಲು ಅವರಿವರ ಮನೆ ಮುಸುರಿ ದಿನವಿಡಿ ತೊಳೆಯುತ್ತಿದ್ದೇನೆ. ಬೆಳಿಗ್ಗೆ ಹೋದರೆ ಸಂಜೆ ಮರಳಿ ಬರುತ್ತೇನೆ. ಮಕ್ಕಳು ಶಿಕ್ಷಣದಿಂದ ವಂಚರಾಗಬಾರದೆಂದು ಹಿರಿಮಗಳು ಹೊಸಪೇಟೆ ಶಾಲೆ ಕಳುಹಿಸುತ್ತಿದ್ದೇನೆ. ಇನ್ನುಳಿದ ಮೂವರು ಮಕ್ಕಳು ಹಂಪಿಯಲ್ಲಿನ ಶಾಲೆಗೆ ತೆರಳುತ್ತಾರೆ. ಬೆಳಿಗ್ಗೆ ಹೋದವರು ಸಂಜೆಯೇ ಮನೆ ಮರಳುವುದಾಗಿದೆ. ಹಂಪಿಯಲ್ಲಿ ನಮ್ಮನ್ನು ತೆರವುಗೊಳಿಸಿದಾಗ ಕಾರಾಣಾಂತರಗಳಿಂದ ಊರಿಗೆ ತೆರಳಿದ್ದೆವು. ಹಿಂದಿರುಗವಷ್ಟರಲ್ಲೇ ಜನರಿಗೆ ನಿವೇಶನ ಹಂಚಿಕೆಯಾಗಿದ್ದವು. ನಮಗೂ ನಿವೇಶನ ಕೊಡಿ, ಎಲ್ಲಾ ದಾಖಲೆಗಳು ಇವೆ ಎಂದು ತೋರಿಸಿದರೂ ನಮ್ಮಂತ ಬಡವರ ಕೂಗಿಗೆ ಬೆಲೆ ಕೊಡುವವರಿಲ್ಲ. ಕೂಲಿ ಕೆಲಸಕ್ಕೆ ಹೋಗುವ ನಮಗೆ ಅಧಿಕಾರಿಗಳು ಬಂದು ಹೋಗುವುದು ಗೊತ್ತಾಗೊದಿಲ್ಲ. ಕೆಲಸಬಿಟ್ಟು ಅಧಿಕಾರಿಗಳನ್ನು ಕಾಯುತ್ತಾ ಕುಳಿತರೆ ಅಂದು ಮಕ್ಕಳ ಹೊಟ್ಟೆಗೆ ತಣ್ಣೀರೆ ಗತಿ. ನಾಲ್ಕು ಹೆಣ್ಣು ಮಕ್ಕಳೊಂದಿಗೆ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳಲು ಅನೇಕ ಕಷ್ಟಗಳನ್ನು ಎದುರಿಸುತ್ತಿದ್ದೇನೆ. ಬರಿ ಹೆಣ್ಣುಮಕ್ಕಳಿರುವ ನಮ್ಮ ಬಡಕುಟುಂಬಕ್ಕೆ ಸರ್ಕಾರ ನಿವೇಶನ ನೀಡಿ ಸೂರಿ ಕಲ್ಪಿಸಿಕೊಡಬೇಕು ಎಂದು ಕಣ್ಣೀರಿಟ್ಟಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಈ ಕುಟುಂಬಕ್ಕೆ ಇನ್ನಾದರೂ ಸೌಲಭ್ಯ ಕಲ್ಪಿಸುವರೆ ಕಾದು ನೋಡಬೇಕು.

**ಕನ್ನಡ ಟ್ಯೂಷನ್**
**KANNADA TUITION**
Kannada Tuition Are Done Here
Kannada Language Tuition for 10th , PUC State, CBSE and ICSE
Syllabus are done here. with Individual attention, helping out students with their assignments Betterment of Their Academic Performance
*****
For More Details
SUMALATHA B.M
94491 90966
N.C.Colony , HOSAPETE
VIJAYANAGARA

**S.M.TRADERS & SERVICES**
ATLAS COPCO COMPRESSORS, HOSEPIPE, DRILL RODS, SPARE PARTS Etc.
Contact for Details
96866 63125
96866 63132
96864 13132
Hampi Road, Hospete-583201

**ನೀವು ಜಾಹೀರಾತು ನೀಡಲು ಬಯಸುತ್ತೀರಾ?**
are you want place native advertisements
Contact for Details
94825 99089
94486 33038

**ಮೈಕ್ರೋ ನ್ಯೂಸ್**

## ಜೂನ್ 12ರಿಂದ ಲೋಕಾಯುಕ್ತ ಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಜೂನ್ ಮಾಹೆಯಲ್ಲಿ ವಿವಿಧೆಡೆ ಲೋಕಾಯುಕ್ತ ಜನ ಸಂಪರ್ಕ ಸಭೆಗಳು ನಡೆಯಲಿವೆ. ಜೂನ್ 12ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಕೊಟ್ಟೂರು ತಾಲೂಕು ಕಚೇರಿ ಸಭಾಂಗಣದಲ್ಲಿ, ಜೂನ್ 20ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಕೂಡ್ಲಿಗಿ ತಾಲೂಕು ಕಚೇರಿ ಸಭಾಂಗಣದಲ್ಲಿ, ಜೂನ್ 25ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಹರಪನಹಳ್ಳಿ ತಾಲೂಕು ಕಚೇರಿ ಸಭಾಂಗಣದಲ್ಲಿ ಸಭೆಗಳು ನಡೆಯಲಿದ್ದು, ಸಾರ್ವಜನಿಕರು ತಮ್ಮ ಕುಂದು ಕೊರತೆಗಳು, ಅಹವಾಲುಗಳು ಹಾಗೂ ತಮ್ಮ ಸರಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬತೆ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯ ದುರಾಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸಂಬಂಧಿಸಿದ ತಾಲೂಕುಗಳಲ್ಲಿ ಆಯಾ ದಿನಾಂಕದಂದು ದ್ವಿಪ್ರತಿಯಲ್ಲಿ ದೂರ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದ ಪೊಲೀಸ್ ಉಪಾಧೀಕ್ಷಕರು ತಿಳಿಸಿದ್ದಾರೆ.

## ಉತ್ತಮ ಭವಿಷ್ಯಕ್ಕೆ ಶಿಕ್ಷಣವೇ ಮಾರ್ಗ

**ಹೊಸಪೇಟೆ ಮೇದಾರ ಸಮಾಜದ ವಿದ್ಯಾರ್ಥಿಗಳಿಗೆ ಸನ್ಮಾನ**



■ **ಹಂಪಿ ಟೈಮ್ಸ್ ಹೊಸಪೇಟೆ**

ಸಮಾಜದ ಅಭಿವೃದ್ಧಿ ಶಿಕ್ಷಣವೊಂದೆ ಮಾರ್ಗ, ವಿದ್ಯಾರ್ಥಿಗಳು ತಮ್ಮ ಉಜ್ವಲ ಭವಿಷ್ಯಕ್ಕಾಗಿ ಕಠಿಣ ಅಭ್ಯಾಸ ಅಗತ್ಯ ಎಂದು ಮೇದಾರ ಸಮಾಜದ ಹಿರಿಯ ಮುಖಂಡ ಎಂ ತಿಮ್ಮಣ್ಣ ಹೇಳಿದರು.

ನಗರದ ಶ್ರೀ ಓಂಕಾರೇಶ್ವರ ಕಲ್ಯಾಣ ಮಂಟಪದಲ್ಲಿ ಹೊಸಪೇಟೆ ಮೇದಾರ ನೌಕರರ ಸೇವಾ ಬಳಗದಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕರದೊಂದಿಗೆ ಸನ್ಮಾನಿಸಿ ಮಾತನಾಡಿದರು. ಆಧುನಿಕತೆಗೆ ತಕ್ಕಂತೆ ವಿದ್ಯಾರ್ಥಿಗಳು ಹೊಸ ಹೊಸ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಮಕ್ಕಳ ಶಿಕ್ಷಣ, ಉಜ್ವಲ ಭವಿಷ್ಯಕ್ಕಾಗಿ ತಂದೆ ತಾಯಿಯ ಶ್ರಮವನ್ನ ಮಕ್ಕಳು ಕಲಿತಮೇಲೆ ಮರೆಯಬಾರದು. ಗುರುಹಿರಿಯರನ್ನು ಗೌರವಿಸುವುದು ನಮ್ಮ ಸಂಸ್ಕೃತಿ ಎನ್ನುವುದು ಮರೆಯಬೇಡಿ ಎಂದರು.

ಹೊಸಪೇಟೆ ಮೇದಾರ ಸಮಾಜದ ಅಧ್ಯಕ್ಷರು ಹಾಗೂ ಯಜಮಾನರು ಚಾಲನೆ ನೀಡಿದರು, ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಮಾಜದ ಮುಖಂಡರಾದ ಎಂ, ಎಸ್, ಹುಲುಗಪ್ಪ, ಎಂ ಲಕ್ಷ್ಮಣ, ವಿಜಯನಗರ ಜಿಲ್ಲಾ ಮೇದಾರ ಕಮಿಟಿ ಅಧ್ಯಕ್ಷ ಎಂ ಭರಮಣ್ಣ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಬಳಗದ ಕಾರ್ಯದರ್ಶಿ ಕೆ,ಶಾಂತರಾಜ್, ಜ್ಯೋತಿ ಮಹೇಶ್, ಗಂಗಾ ನಿರ್ವಹಿಸಿದರು.

## ದಾಳಿಂಬೆ ಬೆಳೆಗಿದೆ ಅಗ್ರಸ್ಥಾನ

**ದಾಳಿಂಬೆ ಬೆಳೆಗಾರರ ತಾಂತ್ರಿಕ ಸಮಾವೇಶದಲ್ಲಿ ಡಾ.ತಮ್ಮಯ್ಯ ಅಭಿಮತ**

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಔಷಧಿ ಗುಣಗಳನ್ನು ಹೊಂದಿರುವ ದಾಳಿಂಬೆ ಇಂದು ಅಂತರ ರಾಷ್ಟ್ರೀಯ ಬೆಳೆಯಾಗಿ, ಬಹು ಬೇಡಿಕೆಯ ಹಣ್ಣಾಗಿದೆ ಎಂದು ಮುನಿರಾಬಾದ್ ತೋಟಗಾರಿಕೆ ಕಾಲೇಜ್‌ನ ಮುಖ್ಯಸ್ಥರಾದ ಡಾ.ಡಿ.ತಮ್ಮಯ್ಯ ಅಭಿಪ್ರಾಯ ಪಟ್ಟರು.

ಪಟ್ಟಣದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ, ದಾಳಿಂಬೆ ಬೆಳೆಗಾರರ ಸಂಘ ಹಾಗೂ ವಿವಿಧ ಕಂಪನಿಗಳ ಸಂಯುಕ್ತಾಶ್ರಯದಲ್ಲಿ ದಾಳಿಂಬೆ ಬೆಳೆಗಾರರ ತಾಂತ್ರಿಕ ಸಮಾವೇಶಕ್ಕೆ ಚಾಲನೆ ನೀಡಿ ಮಾತನಾಡಿದರು. ಅಂದು ಒಂದೇ ರಾಜ್ಯದ ಬೆಳೆಯಾಗಿ ಹೊರ ಬಂದ ದಾಳಿಂಬೆ ಇಂದು ವಿಶ್ವದಾದ್ಯಂತ ಪ್ರಮುಖ ಬೇಡಿಕೆಯಾಗಿರುವ ಹಣ್ಣು ಇದಾಗಿದೆ. ರೈತರಿಗಾಗಿ ದಾಳಿಂಬೆ ಬೆಳೆ ಬೆಳೆಯುವ ವಿಧಾನ, ಸಣ್ಣ ಪುಟ್ಟ ರೈತರು ನಷ್ಟ ಅನುಭವಿಸದೇ ದಾಳಿಂಬೆಳೆಯನ್ನು ಬೆಳೆಯುವ ತರಬೇತಿಗಳು, ಸಮಾವೇಶಗಳು ಅವಶ್ಯವಾಗಿವೆ ಎಂದರು.

ಹ.ಬೊ.ಹಳ್ಳಿ ತಾಲೂಕು ತೋಟಗಾರಿಕೆ ಸಹಾಯಕ ನಿರ್ದೇಶಕರಾದ ಡಾ.ರಾಜೇಂದ್ರ ಮಾತನಾಡಿ, ತಾಲೂಕಿನಲ್ಲಿ ಆರಂಭವಾದ ಈ ಬೆಳೆ ಇಂದು ಬೃಹತ್ ಮಟ್ಟದ ಬೆಳೆಯಾಗಿದೆ. ಅದರಲ್ಲೂ ತಾಂತ್ರಿಕ ಮತ್ತು ಜಾಗೃತಿ ಕೊರತೆಯಿಂದ ರೈತರು ನಷ್ಟ ಅನುಭವಿಸಿದ್ದಾರೆ. ರೈತರು ಬೆಳೆ ವಿಮೆಮಾಹಿತ ಪಡದು ವಿಮೆ ಮಾಡಿಸಿ ಎಂದರು. ಔಷಧಿಯ ಕಂಪನಿಗಳಿಂದ ರೈತರ ಹೊಲಗಳಿಗೆ ಬೇಟಿ ನೀಡುವವರು, >>4



## ದಸಂಸ ಮುಖಂಡರಿಂದ ಸಮಾಧಿಗೆ ಪೂಜೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಶೋಷಿತ ಸಮುದಾಯಗಳಿಗೆ ಸ್ವಾಭಿಮಾನದ ಬದುಕಿನ ಹಣತೆ ಹಚ್ಚಿದವರು ದಸಂಸ ಸ್ಥಾಪಕ ಪ್ರೊ.ಬಿ.ಕೃಷ್ಣಪ್ಪ ಅವರು ಎಂದು ವಿಜಯನಗರ ಜಿಲ್ಲಾ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಎಸ್.ದುರುಗೇಶ್ ಹೇಳಿದರು. ಹರಿಹರ ಪಟ್ಟಣದ ಹನಗವಾಡಿ ಮೈತ್ರಿ ಭವನದಲ್ಲಿ ನಡೆದ ದಸಂಸ ಸ್ಥಾಪಕ ಪ್ರೊ.ಬಿ.ಕೃಷ್ಣಪ್ಪರವರ 86 ನೇಯ ಜನ್ಮ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಅವರ ಸಮಾಧಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿ ಮಾತನಾಡಿದರು. ಡಾ.ಬಿ.ಆರ್. ಅಂಬೇಡ್ಕರವರ ತತ್ವ ಸಿದ್ಧಾಂತಗಳಲ್ಲಿ ನಂಬಿಕೆ ಇಟ್ಟು ಶೋಷಿತ ಸಮುದಾಯಕ್ಕೆ ಅವರ ಆದರ್ಶವೇ ಅಂತಿಮ ಎಂದು ಮನಗಂಡು ಅದರಂತೆ ದಸಂಸ ಎಂಬ ಸಾಮಾಜಿಕ ಚಳವಳಿ ಕಟ್ಟಿ ರಾಜ್ಯದಲ್ಲಿ ದಲಿತ ಸಮೂಹಕ್ಕೆ ಸ್ವಾಭಿಮಾನದ ಸಂಕೇತವಾಗಿದ್ದಾರೆಂದು ಹೇಳಿದರು.

ದಸಂಸ ಹಿರಿಯ ಹೋರಾಟಗಾರ ಪತ್ರಕರ್ತ ಸಿದ್ದಾಪುರ ಡಿ.ಎಂ.ಈಶ್ವರಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕರಾದ ಕಂದಗಲ್ ಕೆ. ಪರಶುರಾಮ್, ದುರುಗೇಶ್, ಜಿಲ್ಲಾ ಕಾರ್ಯಕಾರಣಿ ಸಮಿತಿ ಸದಸ್ಯರಾದ ಕಾನಮಡುಗು ದುರುಗಪ್ಪ, ಗುಡೇಕೋಟೆ ನಾಗರಾಜ್, ಕೆ.ಮಂಜುನಾಥ್, ತಾಲೂಕು ಸಂಚಾಲಕ ಹೊಸಹಳ್ಳಿ ಗಂಗಾಧರ, ತಾಲೂಕು ಖಜಾಂಚಿ ಬಸವರಾಜ್ ಕಲ್ಲಳ್ಳಿ, ತಾಲೂಕು ಸಂಘಟನಾ ಸಂಚಾಲಕ ಫಕೀರಪ್ಪ ಕಾನಮಡುಗು, ಮಹೇಶ್ ಸಿಎಸ್ ಪುರ, ಕೆ.ಬಿ.ಓಬಳೇಶ್, ರುದ್ರಮನಿ ತಿಪ್ಪೇಹಳ್ಳಿ, ಮಂಜುನಾಥ್, ಸೇರಿದಂತೆ ದಲಿತ ಮುಖಂಡರು ಉಪಸ್ಥಿತರಿದ್ದರು.

## ಬೆಳಕಿನ ಹಾದಿ

### ನಮಗಾಗಿ ದುಡಿದ ನಾಯಕ ನಮ್ಮ ಜನಕ



ಅಪ್ಪ ಎಂದರೆ ಬೆಳಕು. ಅಪ್ಪನಿಂದಲೇ ಈ ಬದುಕು. ಅಪ್ಪನ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ. ಅಪ್ಪ ಅಮ್ಮನ ಪ್ರೀತಿ ಅತ್ಯಮೂಲ್ಯವಾದದ್ದು. ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕುವವರೇ ಅಪ್ಪ ಅಮ್ಮ. ಅಂತಹ ತಂದೆ ತಾಯಿಯರನ್ನು ನಾವು ಯಾವಗಲೂ ಗೌರವದಿಂದ ಕಾಣಬೇಕು. ಅದು ನಮ್ಮ ಕರ್ತವ್ಯ ಕೂಡ ಹೌದು. ತಂದೆ ತಾಯಿ ಎಂದರೆ ದೇವರ ಸ್ವರೂಪ. ನಾವು ದೇವರನ್ನು ಎಷ್ಟು ಭಯ ಭಕ್ತಿಯಿಂದ ಗೌರವದಿಂದ ಪೂಜಿಸಿ ಆರಾದಿಸುತ್ತೇವೆಯೋ, ಹಾಗೇಯೇ ತಂದೆ ತಾಯಿಯರನ್ನೂ, ಭಯ ಭಕ್ತಿಯಿಂದ ಪೂಜಿಸಿ, ಆರಾಧಿಸಿ ಗೌರವದಿಂದ ಕಾಣಬೇಕು. ತಂದೆ ತಾಯಿ ಇಲ್ಲದ ಪ್ರಪಂಚವೇ ಶ್ಯೂನ. ಪ್ರತಿಯೊಬ್ಬರ ಪಾಲಿಗೆ ಅಪ್ಪನೇ ಮೊದಲ ನಾಯಕ. ಅಪ್ಪ ಅಂದರೆ ದೇವರು, ಅಪ್ಪ ಅಂದರೆ ಶಕ್ತಿ, ಅಪ್ಪ ಅಂದರೆ ಆಕಾಶ, ಅಪ್ಪ ಅಂದರೆ ಸ್ನೇಹಿತ, ಅಪ್ಪ ಅಂದರೆ ಪ್ರೀತಿ, ಅಪ್ಪ ಅಂದರೆ ಬೆಳಕು, ಅಪ್ಪ ಅಂದರೆ ಸಂತೋಷ ಹೀಗೆ ಎಷ್ಟು ಅರ್ಥಗಳಿವೆ. ಅಪ್ಪ ಮಕ್ಕಳನ್ನು ಬೈಯ್ಯುವುದಕ್ಕೆ ಮುಖ್ಯ ಕಾರಣ ಮಕ್ಕಳು ಯಾವ ತಪ್ಪೂ ಮಾಡದಿರಲಿ ಎಂದು. ಮುಂದಿನ ಭವಿಷ್ಯ ಹಾಳಾಗದಿರಲಿ. ಸುಂದರ ಬದುಕು ಕಟ್ಟಿಕೊಳ್ಳಲು ಎಂಬ ಮೂಲ ಕಾರಣಕ್ಕಾಗಿ ಬೈದು ಬುದ್ದಿ ಹೇಳುತ್ತಾರೆ. ಬಾಹ್ಯವಾಗಿ ಕೋಪ ತೋರಿಸಿದರೂ ಅಂತರಂಗದಲ್ಲಿ ಮಾತ್ರ ಪ್ರೀತಿ ಉಕ್ಕಿ ಹರಿಯುತ್ತಿರುತ್ತದೆ. ಪ್ರತಿಯೊಬ್ಬ ತಂದೆ ತನ್ನಿಂದ ಸಾಧಿಸುವುದಕ್ಕೆ ಆಗದೇ ಇರುವುದನ್ನು ತನ್ನ ಮಕ್ಕಳಿಂದ ಸಾಧಿಸಿ ತೋರಿಸಲು ಕನಸು ಕಟ್ಟಿರುತ್ತಾರೆ. ತನ್ನ ಕಷ್ಟ ಸುಖಗಳನ್ನು ಮರೆತು. ಮಕ್ಕಳ ಜೀವನ ಮತ್ತು ಸಂತೋಷಕ್ಕಾಗಿ ಹಗಲಿರುಳು ದುಡಿಯತ್ತಾರೆ. ಮಕ್ಕಳು ಸಂತೋಷದಲ್ಲಿಯೇ ತನ್ನ ನೋವನ್ನು ಮರೆಯುತ್ತಾರೆ. ಅಂತಹ ತ್ಯಾಗಮಯಿ ಜೀವಕ್ಕೆ ಸಲ್ಲಬೇಕಾದ ಗೌರವ ಮತ್ತು ಪ್ರೀತಿಯನ್ನು ಕೊಟ್ಟು ಅವರ ಮನದಲ್ಲಿ ಆನಂದವನ್ನು ಸೃಷಿಸಬೇಕು. ನಮಗಾಗಿ ದುಡಿದು ದಣಿದ ದೇಹಕ್ಕೆ ಸದಾ ಆಸರೆಯಾಗಿ ಬದುಕಬೇಕು. ಅಂದಾಗ ಮಾತ್ರ ಬದುಕಿಗೆ ಅರ್ಥ ಮತ್ತು ಬದುಕಿದ್ದಕ್ಕೂ ಸಾರ್ಥಕ.



**– ವಿ.ಎಂ.ಎಸ್.ಗೋಪಿ,** ಬೆಂಗಳೂರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

### ನ್ಯೂನತೆಗಳಿದ್ದವರಿಗೆ ಅನುಕಂಪಕ್ಕಿಂತ ಅವಕಾಶ ಕಲ್ಪಿಸಿ

# ಅಂತರರಾಷ್ಟ್ರೀಯ ಪ್ಯಾರವಾಲ್ ಕ್ಲೈಂಬರ್ ಸುನಿತ

ವಾಲ್ ಕ್ಲೈಂಬಿಂಗ್ ಎಂಬುದು ಸಾಹಸ ಕ್ರೀಡೆಗಳಲ್ಲಿ ಒಂದು ಮಾದರಿ, ಕ್ರೀಡಾಪಟು ತನಗೆ ನೀಡಿದ 06 ನಿಮಿಷಗಳ ಸಮಯದಲ್ಲಿ ಅತಿ ಹೆಚ್ಚು ಎತ್ತರ ತಲುಪಿದಾಗ ವಿಜಯಶಾಲಿ ಎಂದು ಘೋಷಿಸುತ್ತಾರೆ.

ಜೀವನದಲ್ಲಿ ಯಾರಿಗೂ ಭಾರವಾಗದೇ ಸ್ವಾವಲಂಬಿಯಾಗಿ ಬದುಕಬೇಕೆಂಬ ನಿರ್ಧಾರದೊಂದಿಗೆ ಬೆಂಗಳೂರನ್ನು ತಲುಪಿದ ಸುನೀತ ಭಾರತದ ಕೀರ್ತಿಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳಗಲು ಶ್ರಮಿಸುತ್ತಿದ್ದಾರೆ.

ಭಯ ಹೊಂದಿದ್ದ ತಂದೆ-ನೀಲಕಂಠ ತಾಯಿ-ಸಾವಿತ್ರಿ, ಸಹೋದರ ಮತ್ತು ಸಹೋದರಿಯರು ಸುನಿತಾರನ್ನು ಬೇರೆ ಊರುಗಳಿಗೆ ಕಳುಹಿಸಿಕೊಡಲು ನಿರಾಕರಿಸುತ್ತಾರೆ ಆದರೂ, ನಾನು ಏನನ್ನಾದರೂ ಸಾಧಿಸಲೇಬೇಕು, ನನಗೂ ಒಂದು ಅವಕಾಶ ಕಲ್ಪಿಸಿಕೊಡಿ ಎಂಬ ದೃಢ ನಿರ್ಧಾರದೊಂದಿಗೆ ಕ್ರೀಡೆಯನ್ನು ಆಯ್ಕೆ ಮಾಡಿಕೊಂಡು ಮುಂದುವರೆಯುತ್ತಾರೆ ಸುನಿತಾ.

ಹುಟ್ಟುವಾಗಲೇ ತಮ್ಮ ಎರಡೂ ಕಣ್ಣುಗಳನ್ನು ಶೇಕಡ 65 ಭಾಗದಷ್ಟು ನ್ಯೂನತೆಯನ್ನು ಹೊಂದಿದ್ದ ಇವರು ಪ್ರಾಥಮಿಕ ಶಿಕ್ಷಣವನ್ನು ತೊಲಗಿ ಹಾಗೂ ಪ್ರೌಢ ಶಿಕ್ಷಣವನ್ನು ಚಿಕ್ಕದಿನಕೊಪ್ಪ, ಪದವಿ ಪೂರ್ವ ಶಿಕ್ಷಣವನ್ನು ಮುಗುಳಿಹಾಳ್ ಖಾನಾಪುರ ತಾಲೂಕು ಬೆಳಗಾಂನಲ್ಲಿ ಪಡೆದಿರುತ್ತಾರೆ.

ಅಂಗವಿಕಲರಿಗೆ ಸಿಗ ಬೇಕಾದ ತಿಂಗಳ ವೇತನವು ತಡವಾದ ಹಿನ್ನೆಲೆ ಬೆಳಗಾವಿ ತಾಲೂಕು ಕಚೇರಿಗೆ ಭೇಟಿ ನೀಡಿದ ಸಂದರ್ಭ ಅಲ್ಲಿ ಸಮಿನ ಎಂಬುವವರು ಅಂಗವಿಕಲರಿಗಾಗಿ ಇರುವ ಬೆಳಗಾವಿಯ ಸಮರ್ಥನಂ ಸಂಸ್ಥೆ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ ತದನಂತರ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುವ ದೃಷ್ಟಿಯಿಂದ 03 ತಿಂಗಳುಗಳ ಕಾಲ ಕಂಪ್ಯೂಟರ್ ಕಲಿತ ಸುನಿತ ಬೆಂಗಳೂರಿನ ಮುಖ್ಯ ಕಚೇರಿ ಸಮರ್ಥನಂನಲ್ಲಿ 01 ವರ್ಷ ಆಶ್ರಯವನ್ನು ಪಡೆಯುತ್ತಾರೆ ವಾರ್ಡನ್ ಸುಮಾರವರ ಮಾರ್ಗ ದರ್ಶನದಲ್ಲಿ ಉತ್ತಮ ಉದ್ಯೋಗ ಪಡೆಯುವ ದೃಷ್ಟಿಯಿಂದ ಪದವಿ ಶಿಕ್ಷಣವನ್ನು ಮುಂದುವರೆಸಿ ವಿಜಯ ನಗರ ಕಾಲೇಜು ಬೆಂಗಳೂರಿನಲ್ಲಿ ಬಿ,ಎ, ಪದವಿ ತಿಯನ್ನು ಪಡೆಯುತ್ತಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಕ್ರೀಡಾ ಆಸಕ್ತಿ ಹೊಂದಿದ ಇವರು ಬೆಂಗಳೂರಿನಲ್ಲಿ ಪಿಂಕಥಾನ್ ಸಂಸ್ಥೆ ಮ್ಯಾರಥಾನ್ ಓಟವನ್ನು ಆಯೋಜಿಸಿದ್ದು ಅದರಲ್ಲಿ ಭಾಗವಹಿಸಿ ತದನಂತರ, 5 ಕಿ.ಮೀ, 10 ಕೀ,ಮೀ. ಓಟದ ಅಭ್ಯಾಸವನ್ನು ಆರಂಭಿಸುತ್ತಾರೆ ಆದರೆ ಓಟದ ಸ್ಪರ್ಧೆಗಳಲ್ಲಿ





ಹೇಳಿಕೊಳ್ಳುವಂತಹ ಸಾಧನೆ ಇವರಿಂದ ಸಾಧ್ಯವಾಗುವುದಿಲ್ಲ.

ಆದರೂ ಇವರು 2018 ರಲ್ಲಿ ಬೆಂಗಳೂರಿನಲ್ಲಿ ಆಯೋಜಿಸಿದ ಪೂರ್ಣ ಮ್ಯಾರಥಾನ್ ಸ್ಪರ್ಧೆಯಲ್ಲಿ 5:00 ಘಂಟೆ 39 ನಿಮಿಷಗಳ ಸಮಯದಲ್ಲಿ ಪೂರ್ಣ ದೂರವನ್ನು (42.192 ಕೀ,ಮೀ) ಕ್ರಮಿಸಿ 'ಇಂಡಿಯನ್ ಬುಕ್ ಆಫ್ ರೆಕಾರ್ಡ್' ದಾಖಲೆಯನ್ನು ಮಾಡುತ್ತಾರೆ.

ಸಮರ್ಥನಂ ಸಂಸ್ಥೆಯ ಶಿಖಾಶೆಟ್ಟಿ ಇವರ ಮಾಹಿತಿಯ ಮೇರೆಗೆ ವಾಲ್ ಕ್ಲೈಂಬಿಂಗ್ ರಾಷ್ಟ್ರಮಟ್ಟದ ಆಯ್ಕೆಯಲ್ಲಿ ಪಾಲ್ಗೊಂಡು ಆಯ್ಕೆಗೊಳ್ಳುತ್ತಾರೆ 03 ತಿಂಗಳುಗಳ ಕಠಿಣ ತರಬೇತಿಯನ್ನು ಪಡೆದು ರಾಷ್ಟ್ರಮಟ್ಟದ ಕ್ರೀಡಾಕೂಟಕ್ಕೆ ಭಾಗವಹಿಸುತ್ತಾರೆ.

2018 ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ರಾಷ್ಟ್ರೀಯ ವಾಲ್ ಕ್ಲೈಂಬಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ಚಿನ್ನದ ಪದಕವನ್ನು ಪಡೆಯುತ್ತಾರೆ ಪದಕವನ್ನು ಪಡೆದು ಮನಸ್ಸಿನಲ್ಲಿಯೇ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಕೀರ್ತಿ ತರುವ ನಿರ್ಧಾರ ಮಾಡುತ್ತಾರೆ.

2021 ರಲ್ಲಿ ರಷ್ಯಾದಲ್ಲಿ ನಡೆದ ಅಂತರಾಷ್ಟ್ರೀಯ ವಾಲ್ ಕ್ಲೈಂಬಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ಕಂಚಿನ ಪದಕವನ್ನು ಪಡೆಯುತ್ತಾರೆ.

ಬೆಂಗಳೂರಿನ ಜನರಲ್ ತಿಮ್ಮಯ್ಯ ಸಾಹಸ ಕ್ರೀಡೆಗಳ ಅಕಾಡೆಮಿಯಲ್ಲಿ ಪ್ರವೇಶ ಪಡೆದು ಉಚಿತ ಊಟ,ವಸತಿ ಮತ್ತು ದೆಹಲಿಯ ಹೀರಲಾಲ್ ಇವರ ತರಬೇತಿ,ಮಾರ್ಗದರ್ಶನದೊಂದಿಗೆ 2023ರಲ್ಲಿ ಸ್ವಿಜರ್ಲ್ಯಾಂಡ್ ನಲ್ಲಿ ನಡೆದ ವರ್ಲ್ಡ್ ವಾಲ್ ಕ್ಲೈಂಬಿಂಗ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿ ಚಿನ್ನದ ಪದಕವನ್ನು ಪಡೆದಿರುತ್ತಾರೆ.

ಇತ್ತೀಚೆಗೆ ವಾಲ್ ಕ್ಲೈಂಬಿಂಗನ್ನು ಒಲಂಪಿಕ್ ನಲ್ಲಿ ಸೇರಿಸಿದ್ದು 27 ರ ಹರೆಯದ ಸುನಿತಾ ಒಲಂಪಿಕ್ ಪದಕ ಪಡೆಯುವ ಗುರಿಯನ್ನು ಹೊಂದಿದ್ದಾರೆ.

ಮೊದಮೊದಲು ಬೇಸರದಲ್ಲಿದ್ದ ತಂದೆ ತಾಯಿ ಸಾಧನೆಯನ್ನು ಗಮನಿಸಿ ತೃಪ್ತರಾಗಿದ್ದಾರೆ, ಅಂಧತ್ವ ತಿಳಿದಿದ್ದ ಶಾಲೆ ಮತ್ತು ಕಾಲೇಜಿನ ಎಲ್ಲಾ ಶಿಕ್ಷಕರಿಂದ ಸಾಕಷ್ಟು ಸಹಕಾರ ದೊರೆತಿದೆ, ಸಮರ್ಥನಂ ಸಂಸ್ಥೆಯ ಸರ್ವರಿಗೂ,ಈ ಹಿಂದೆ ತರಬೇತಿ ನೀಡಿದ ಸಾಧಿಕ್ ಮತ್ತು ಮಹಮ್ಮದ್, ಈಗ ತರಬೇತಿ ನೀಡುತ್ತಿರುವ ಹೀರಲಾಲ್ ರವರಿಗೂ, ಐ,ಎಂ,ಎಫ್. ಮತ್ತು ಜನರಲ್ ತಿಮ್ಮಯ್ಯ ಅಕಾಡೆಮಿಯ ಸರ್ವ ಸದಸ್ಯರಿಗೂ ಧನ್ಯವಾದಗಳನ್ನು ತಿಳಿಸುತ್ತಾರೆ.

ಪೋಷಕರೇ ಅಂಗ ನ್ಯೂನ್ಯತೆ ಶಾಪವಲ್ಲ ಇದೊಂದು ವರದಾನವೆಂದು ಭಾವಿಸಿ ನಿಮ್ಮ ಮಕ್ಕಳನ್ನು ಮನೆಯಲ್ಲಿ ಕಟ್ಟಿ ಹಾಕದೆ ಹೂರತನ್ನಿ ಅವರಿಗೆ ಬೇಕಾಗುವ ಎಲ್ಲಾ ವ್ಯವಸ್ಥೆಗಳು ಸಮಾಜದಲ್ಲಿ ಇವೆ ಕೇಳೀ ತಿಳಿದು ತೊಡಗಿಸಲು ಹಿಂದೇಟು ಹಾಕದಿರಿ.

ನ್ಯೂನ್ಯತೆ ಉಳ್ಳವರಿಂದ ಏನು ಮಾಡಲು ಸಾಧ್ಯ? ಎಂಬುದಾಗಿ ನಿಮಗೆ ನೀವೇ ಅಂದುಕೊಳ್ಳಬೇಡಿ ಅವರಿಗೂ ಮುಕ್ತ ಅವಕಾಶ ಕಲ್ಪಿಸಿ ಸಾಧನೆ ಮಾಡಲು ಸಾಧ್ಯವಾಗದಿದ್ದರೂ ಸ್ವಾವಲಂಬಿಗಳಾಗಿ ರೂಪುಗೊಳ್ಳುತ್ತಾರೆ.

ಸರ್ಕಾರ ನಮ್ಮಂತ ವಿಶೇಷ ಚೇತನ ಸಾಧಕರನ್ನು ಗುರುತಿಸಿ ಉದ್ಯೋಗವನ್ನು ಕಲ್ಪಿಸಿದ್ದೆ ಆದರೆ ಇನ್ನಷ್ಟು ಸಾಧನೆಗಳು ನಮ್ಮಿಂದ ಸಾಧ್ಯ ಅದರೊಂದಿಗೆ ಜಿಲ್ಲಾವಾರು ತರಬೇತಿ ಕೇಂದ್ರಗಳನ್ನು ತೆರೆದು ತರಬೇತಿಯನ್ನು ನೀಡಿದ್ದೆ ಆದರೆ ಪದಕಗಳನ್ನು ಗೆದ್ದು ಕೊಡುವುದರಲ್ಲಿ ಅನುಮಾನವಿಲ್ಲ ಎಂದು ಸಹಕಾರಕ್ಕಾಗಿ ಸರ್ಕಾರಕ್ಕೆ, ಸಂಘ-ಸಂಸ್ಥೆಗಳು, ದಾನಿಗಳು ವಿವಿಧ ಕ್ರೀಡಾ ಸಂಘಟನೆಗಳು ಮತ್ತು ಸಮಾಜ ಸೇವಕರಲ್ಲಿ ಸಹಾಯ ನೀಡಬೇಕಾಗಿ ಕೇಳಿಕೊಳ್ಳುತ್ತಾರೆ.

ವಾಲ್ ಕ್ಲೈಂಬಿಂಗ್ ಕ್ರೀಡೆ ಕ್ರೀಡಾಪಟುವಿನ ಮನೋಬಲವನ್ನು ಹೆಚ್ಚಿಸುವುದಲ್ಲದೆ, ನನ್ನಿಂದ ಇದು ಸಾಧ್ಯ ಎಂಬ ದೃಢಸಂಕಲ್ಪವನ್ನು ಗಟ್ಟಿಗೊಳಿಸಿ ಸ್ವತಂತ್ರವಾಗಿ ಬೆಳೆಯುವುದನ್ನು ಕಲಿಸಿಕೊಡುತ್ತದೆ.

ಯಾರಿಗೂ ತಾನು ಭಾರವಾಗಿರದೆ ತನ್ನ ಭಾರವನ್ನು ತಾನೇ ತನ್ನ ಕೈ ಕಾಲುಗಳ ಮೇಲೆ ಹೂರಬಹುದೆಂಬ ಕಿಚ್ಚನ್ನು ಹೆಚ್ಚಿಸುತ್ತದೆ.

ನಿಖರವಾದ ಗುರಿಯನ್ನು ತಲುಪಲು ಕಷ್ಟದ ಮೆಟ್ಟಿಲುಗಳನ್ನು ಹತ್ತಲೇ ಬೇಕು, ಒಂದೊಂದು ಮೆಟ್ಟಿಲನ್ನು ಹತ್ತುತ್ತ ತುತ್ತ ತುದಿಗೆ ನಿಂತಾಗ ಕಷ್ಟಗಳು ನಮ್ಮ ಪಾದದ ಕೆಳಗೆ ಇರುತ್ತದೆ ಎಂಬುದನ್ನು ವಾಲ್ ಕ್ಲೈಂಬಿಂಗ್ ಕಲಿಸುತ್ತದೆ.

ಈ ಕ್ರೀಡೆಯಲ್ಲಿ ಇದೊಂದೇ ಮಾದರಿಯಲ್ಲದೆ ಬೇರೆ ಬೇರೆ ಚಟುವಟಿಕೆಗಳಿವೆ. ನಿಮಗೆ ಆಸಕ್ತಿ ಇರುವ ಯಾವುದನ್ನಾದರೂ ಆಯ್ಕೆ ಮಾಡಿಕೊಂಡು ಗುರಿಯನ್ನು ತಲುಪಬಹುದು.

ಕ್ರೀಡೆ ಕೇವಲ ಪದಕಗಳನ್ನು ಗೆಲ್ಲಿಸಿ ಕೊಡುವುದನ್ನು ಕಲಿಸುವುದಿಲ್ಲ ಜೊತೆ ಜೊತೆಗೆ ಜೀವನದ ಹಲವಾರು ಕ್ಲಿಷ್ಟಕರ ಸನ್ನಿವೇಶಗಳನ್ನು ಗೆಲ್ಲುವುದು ಹೇಗೆ ಎಂಬುದನ್ನು ಕಲಿಸಿಕೊಡುತ್ತದೆ ಅದರಲ್ಲೂ, ಸಾಹಸ ಕ್ರೀಡೆಗಳು ಇನ್ನು ಹೆಚ್ಚಿನದಾಗಿ ಕಲಿಸಿಕೊಡುತ್ತವೆ ಎಂಬುದಾಗಿ ಸುನಿತಾ ನುಡಿಯುತ್ತಾರೆ.


ಹೌದು... ಇಂದಿನ ದಿನಗಳಲ್ಲಿ ಕ್ರಿಕೆಟ್ಗೆ ಮಾತ್ರ ಹೆಚ್ಚಿನ ಪ್ರಚಾರ, ಬೆಂಬಲ ಮತ್ತು ಪ್ರೋತ್ಸಾಹ ನೀಡುತ್ತಿದ್ದೇವೆ ಇದು ತಪ್ಪಲ್ಲ, ಇದರೊಂದಿಗೆ ನಮ್ಮಲ್ಲಿ ಹಲವಾರು ಕ್ರೀಡೆಗಳು ಇವೆ ಎಂಬುದನ್ನು ಮರೆತಿದ್ದೇವೆ ಬೇರೆ ಕ್ರೀಡೆಗಳಲ್ಲಿ ಸಾಧಿಸಿದ ಸಾಧಕರನ್ನು ಮರೆಯುತ್ತಿದ್ದೇವೆ, ಮರೆಮಾಚುತಿದ್ದೇವೆ ಇನ್ನಾದರೂ ಅಂಥವರನ್ನು ಮುನ್ನೆಲೆಗೆ ತಂದು ಬೆಂಬಲಿಸೋಣ ಸಾಹಸ ಕ್ರೀಡೆಗಳನ್ನು ಮೈಗೂಡಿಸಿಕೊಳ್ಳೋಣ ಏನಂತೀರಿ..?

# ಹಸಿರು ಅಭ್ಯರ್ಥಿಯನ್ನ ಕೈಹಿಡಿಯದ ಜನ

ಆಡು ಮುಟ್ಟದ ಸೊಪ್ಪಿಲ್ಲ ಶಿವರಾಮ ಕಾರಾಂತರು ಕೈ ಆಡಿಸದೇ ಇರುವ ಕ್ಷೇತ್ರವಿಲ್ಲ ಎಂಬ ಮಾತು ಗಾದೆ ಮಾತಿನಂತೆ ಜನಜನಿತವಾಗಿದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಸಾಹಿತ್ಯ ರಚನೆ ಮಾಡಿದ್ದಾರೆ. ನವೋದಯ ಪಂಥದ ಬರಹಗಾರರಾಗಿದ್ದು? ಕವಿ? ಕಾದಂಬರಿಕಾರರು ನಾಟಕಕಾರರು ಚಿತ್ರ ಕಲಾವಿದರು ಪ್ರಬಂಧ ಸಣ್ಣ ಕಥೆ ಕಲೆ ಮತ್ತು ವಾಸ್ತುಶಿಲ್ಪ ವಿವರಣೆ ಬರಹಗಾರರು? ಯಕ್ಷಗಾನ ಕಲಾವಿದರು? ವಿಜ್ಞಾನದ ಬಗ್ಗೆ ಹಾಗೂ ಮಕ್ಕಳ ಕಥೆಯನ್ನು ಬರೆದಿದ್ದಾರೆ.

ಡಾ।ಶಿವರಾಮ ಕಾರಂತರನ್ನು ಭಾರತದ "ಪ್ಲೇ ಮ್ಯಾಟ್"ಎನ್ನುವರು. ಅಂದರೆ ಎಲ್ಲಾ ವಿಭಿನ್ನ ವಿಷಯಗಳ ತಜ್ಞ ಎಂದು ಇದರ ಅರ್ಥ. ಭಾರತದ ಪ್ರಸಿದ್ಧ ಇತಿಹಾಸಕಾರರಾದ "ರಾಮಚಂದ್ರ ಗುಹಾ" ರವರು ಕಾರಂತರನ್ನು ಕುರಿತು "ಕರ್ನಾಟಕದಲ್ಲಿ ಹುಟ್ಟಿದ ಭಾರತದ ರವೀಂದ್ರನಾಥ ಟ್ಯಾಗೋರ್" ಎಂದಿದ್ದಾರೆ. ವಿಷಯಗಳಲ್ಲೂ ಪ್ರಭುತ್ವವನ್ನು ಸಾಧಿಸಿದ್ದರು. ಹಾಗಾಗಿ ಇವರನ್ನು ನಡೆದಾಡುವ ವಿಶ್ವಕೋಶ", ".ಕಡಲ ತೀರದ ಭಾರ್ಗವ "ಎನ್ನುವರು.

ಭಾರತದ ಸ್ವಾತಂತ್ರ್ಯದ ಆಂದೋಲನದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿ ಅವರು ಅಸಹಕಾರ ಚಳುವಳಿಗೆ ಕರೆ ನೀಡುತ್ತಾರೆ. ಆ ಸಂದರ್ಭದಲ್ಲಿ ಮಂಗಳೂರು ಭಾಗದಲ್ಲಿ ಕಾರ್ನಾಡ್ ಸದಾಶಿವ ರಾಯರ ಪ್ರಭಾವಕ್ಕೆ ಒಳಗಾಗಿ ಕಾರಾಂತರೂ ಕೂಡ ತಮ್ಮ ಕಾಲೇಜನ್ನು ತೊರೆದು ಸ್ವತಂತ್ರ ಚಳುವಳಿಗೆ ಧುಮುಕುತ್ತಾರೆ. ತಮ್ಮ ಕಾಲೇಜಿನ ಪ್ರಿನ್ಸಿಪಾಲರಿಗೆ ಕಾರಂತರು ಹೀಗೆ ಪತ್ರ ಬರೆಯುತ್ತಾರೆ. "I want to non-co-operate with your education system" ಎಂದು ಅಸಹಕಾರ ಚಳುವಳಿಗೆ ಧುಮುಕುತ್ತಾರೆ. ತುರ್ತು ಪರಿಸ್ಥಿತಿಯನ್ನು ಉಗ್ರವಾಗಿ ವಿರೋಧಿಸಿ ಪ್ರತಿಭಟನಾರ್ಥವಾಗಿ ಪದ್ಮಭೂಷಣ ಪ್ರಶಸ್ತಿಯನ್ನು



ಹಿಂದಿರುಗಿಸಿದರು. ಒಬ್ಬ ಸಾಹಿತಿಯ ಹೊಣೆ ಸಾಮಾನ್ಯ ಜನತೆಯ ಹೊಣೆಗಿಂತಲೂ ಹೆಚ್ಚಿನದೆಂದು ಭಾವಿಸಿದ್ದರು.

ಅಷ್ಟೇ ಅಲ್ಲದೇ ಕಾರಂತರು ಪರಿಸರವಾದಿಗಳಾಗಿದ್ದು ಕೈಗಾ ಅಣುಸ್ಥಾವರದ ವಿರುದ್ಧ ಹೋರಾಟ ಮಾಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಕಾಳಿ ನದಿಯ ತಟದಲ್ಲಿ "ವಿಶೇಷ ಆರ್ಥಿಕ ವಲಯ"(SEZ) ದ ವಿರುದ್ಧ ಬೃಹತ್ ಆಂದೋಲನವನ್ನು ಕೈಗೊಳ್ಳುತ್ತಾರೆ ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯ ನಾಶ, ಪಶ್ಚಿಮ ಘಟ್ಟಗಳ ನಾಶ, ಅಣು ವಿಕಿರಣದಿಂದ ಪರಿಸರ ಮಾಲಿನ್ಯ? ಜೀವ ಪ್ರಭೇಧಗಳಿಗೆ ಹಾನಿಯಾಗುತ್ತದೆ ಎಂದು ಕೈಗಾ ವಿರೋಧಿ ಚಳುವಳಿಯನ್ನು ತಮ್ಮ ನಾಯಕತ್ವದಲ್ಲಿ ಆರಂಭಿಸುವುದರ ಮೂಲಕ ವ್ಯಾಪಕ ಪ್ರತಿಭಟನೆ? ಸಭೆಗಳೂ ನಡೆದವು. ಆ ಸಂದರ್ಭದಲ್ಲಿ ಕ್ರಿ.ಶ.1989 ರಲ್ಲಿ ಲೋಕಸಭಾ ಚುನಾವಣೆಗಳು ಘೋಷಣೆಯಾಗುತ್ತವೆ. ಪ್ರತಿಭಟನಾರ್ಥಕವಾಗಿ ಹೋರಾಟಗಾರರೆಲ್ಲಾ ಸೇರಿ"ಹಸಿರು ಅಭ್ಯರ್ಥಿ"ಎಂದು ಕಾರಾಂತರನ್ನು ಉತ್ತರ ಕನ್ನಡ ಲೋಕಸಭಾ ಕ್ಷೇತ್ರಕ್ಕೆ ಚುನಾವಣೆಗೆ ನಿಲ್ಲಿಸುತ್ತಾರೆ. ಪೇಜಾವರ ವಿಶ್ವೇಶ್ವರ ತೀರ್ಥ ಸ್ವಾಮಿಗಳು ಹಾಗೂ ಅನೇಕ ಗಣ್ಯರು.ಅಭಿಮಾನಿಗಳು ಶಿವರಾಮ ಕಾರಂತರ ಪರ ಪ್ರಚಾರ ಮಾಡುತ್ತಾರೆ.ಅಂದು ಉತ್ತರ ಕನ್ನಡ ಲೋಕಸಭಾ ಕ್ಷೇತ್ರವು ಅಕ್ಷರಶಃ ರಂಗೆದ್ದು ಇಡೀ ದೇಶದ ಗಮನ ಸೆಳೆಯಿತು. ಈವರೆಗೆ ಎರಡು ಬಾರಿ ಗೆದ್ದು ಮೂರನೇ ಬಾರಿ ಕಣಕ್ಕಿಳಿದ್ದಿದ್ದ ಕಾಂಗ್ರೆಸ್ ನ ದೇವರಾಯ ನಾಯ್ಕ ವಿರುದ್ಧ ಚಿತ್ರನಟ ಅನಂತ ನಾಗ್ ಮತ್ತು ಶಿವರಾಮ ಕಾರಂತರ ನಡುವೆ ಸ್ಪರ್ಧೆ ನಡೆದಿತ್ತು. ಅನಂತನಾಗ್ ಅವರು ಜನತಾದಳದಿಂದ ಸ್ಪರ್ಧಿಸಿದ್ದು ಆಗ ರಾಮಕೃಷ್ಣ ಹೆಗಡೆ ಅವರ ಪ್ರಭಾವ ಹಿನ್ನೆಲೆಯಲ್ಲಿ ಜನತಾದಳದ ಅಭ್ಯರ್ಥಿ ಅನಂತ್ ನಾಗ್ ಸ್ಪರ್ಧೆ ಮಹತ್ವವನ್ನು ಪಡೆದುಕೊಂಡಿತ್ತು. ಇನ್ನೊಂದೆಡೆ ಕೈಗಾ ಅಣುಸ್ಥಾವರದ ನಿರ್ಮಾಣ ವಿರುದ್ಧದ ಹೋರಾಟ ಜಿಲ್ಲೆಯಲ್ಲಿ ಕಾವು ಪಡೆದಿದ್ದ ಕಾರಣಕ್ಕೆ ಪರಿಸರ ಹೋರಾಟಗಾರರ ಧ್ವನಿಯಾಗಿ ಕಾರಂತರ ಸ್ಪರ್ಧೆ ಇನ್ನಷ್ಟು ಮಹತ್ವವನ್ನು ಪಡೆದುಕೊಂಡಿತು. ಅಂತಿಮವಾಗಿ ಕಾಂಗ್ರೆಸ್ ನ ದೇವರಾಯ ನಾಯ್ಕ ಅವರಿಗೆ 2,40,571 ಮತಗಳನ್ನು ಪಡೆದು ವಿಜಯಿ ಯಾಗುತ್ತಾರೆ. ಜನತಾದಳದ ಅನಂತ್ ನಾಗ್ 2,09,003 ಮತಗಳನ್ನು ಪಡೆಯುತ್ತಾರೆ. ಶಿವರಾಮ ಕಾರಂತರು 58,902 ಮತಗಳನ್ನು ಅಷ್ಟೇ ಪಡೆಯುತ್ತಾರೆ. ಹೀಗೆ ಬುದ್ಧಿವಂತರೆನಿಸಿಕೊಂಡ ಉತ್ತರ ಕನ್ನಡದ ಜನ ಪರಿಸರದ ಉಳಿವಿಗಾಗಿ ಚುನಾವಣೆಗೆ ನಿಂತ ಕನ್ನಡದ ಧೀಮಂತ ಸಾಹಿತಿಯನ್ನು ಸೋಲಿಸಿರುವುದು ವಿಪರ್ಯಾಸ.



**– ಶ್ರೀ.ಮಧು.ಕೆ.**
**ಹವ್ಯಾಸಿ ಬರಹಗಾರರು. ಕೊಟ್ಟೂರು.**

- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

ಕವಿ ಮನಸು

## ಸಂತೆಯಲ್ಲೊಂದು ಉಪಾಯ.....!!



ಬಾ ಜಾಕಿ ನಾವು ಸಂತೆಗೆ ಹೋಗೋಣ
ಸಂತೆಯಲ್ಲಿ ಅಲ್ಲಿಲ್ಲಿ ಅಡ್ಡಾಡಿ ಬರೋಣ
ಮನೆಯವರ ಕಣ್ತಪ್ಪಿಸಿ ಓಡಿ ಹೋಗೋಣ
ತಿನ್ನಲು ಏನಾದ್ರೂ ಸಿಕ್ಕಿದ್ರೆ ಹಂಚಿ ತಿನ್ನೋಣ

ಬಾ ಬಿಲ್ಲಿ ನಾವು ಜೊತೆಗೆ ಹೋಗೋಣ
ಸಂತೆ ಅಂದ್ರೆ ಏನೂಂತ ನೋಡಿ ಬರೋಣ
ಸಂತೆಯಲ್ಲಿ ಆಡಿ ನಲಿದು ಕಾಲ ಕಳೆಯೋಣ
ಮನೆಯ ಗೂಡಿನಿಂದ ಸ್ವತಂತ್ರ ಪಡೆಯೋಣ

ನೋಡು ಜಾಕಿ ಹೇಗಿದೆ ಜನರ ಜಂಗುಳಿ!
ಮೀನಿನ ಸುತ್ತ ಈ ಜನರದ್ದೇ ಗಲಿಬಿಲಿ
ಮೀನು ಖರೀದಿಸಲು ಕಾಸಿಲ್ಲ ನಮ್ಮ ಬಳಿ
ಮೀನಿನ ಸುವಾಸನೆಗೆ ನೀರೂರಿದೆ ಬಾಯಲಿ!

ಬಾ ಬಿಲ್ಲಿ ನಾವೊಂದು ಉಪಾಯ
ಮಾಡೋಣ
ತಾಜಾ ಮೀನನ್ನು ನಾವು ಕದ್ದು ಒಯ್ಯೋಣ
ನೀನು ಹೋಗಿ ಮೆಲ್ಲನೆ ಮೀನು ಕದ್ದು ಬಿಡು
ಓಡಿ ಬಂದು ನನ್ನ ಬೆನ್ನಲ್ಲಿ ಕುಳಿತು ಬಿಡು!

ಹೌದು ಜಾಕಿ ನಿನ್ನದು ಒಳ್ಳೆಯ ಉಪಾಯ
ಜನರ ಕಣ್ಣಿಗೆ ಕಂಡರೆ ನಮಗೇ ಅಪಾಯ
ಬಾ ಜಾಕಿ ಮೀನು ಕದ್ದು ನಾವು ಓಡೋಣ
ಯಾರಿಗೂ ಕಾಣದಂತೆ ಹಂಚಿ ತಿನ್ನೋಣ!

– ಪ್ರಜ್ಞಾ ರವೀಶ್, ಕುಳಮರ್ವ

## ಕೈಹಿಡಿದು ನಡೆಸೆನ್ನನು

ಪುಟ್ಟ ಪಾದಗಳಂದು ಮೊದಲ ಹೆಜ್ಜೆಯನಿಟ್ಟು
ಜೋಲಿ ಹೊಡೆಯದಂತೆ ಕೈಬೆರಳುಗಳ
ಕೊಟ್ಟು
ಹಗಲಿರುಳು ಕಾಯುವ ತಾಯಿಯ ತೆರದಂತೆ
ಅನವರತ ನನ್ನೀ ಕೈಹಿಡಿದು ನಡೆಸನ್ನನು

ಜಾತ್ರೆ ಜಂಗುಳಿಯಲ್ಲಿ ಕಳೆಯದಂತೆ
ಜೊತೆಯಾಗಿ
ಹೆಗಲ ಮೇಲೆಹೊತ್ತು ಮಕ್ಕಳಂತೆ ತಾವಾಗಿ
ಬದುಕ ಎದುರಿಸುವ ವಿಶ್ವಾಸವನು ನಮಗೀವ
ತಂದೆಯಂತೆ ನನ್ನಿ ಕೈಹಿಡಿದು
ನಡೆಸೆನ್ನನು

ಕಗ್ಗತ್ತಲ ದಾರಿಯಲ್ಲಿ ಅಜ್ಞಾನ ಮುತ್ತಿರಲು
ಮಾಯೆಯ ಪಾಶಗಳು ನಮ್ಮನ್ನು ಬಿಗಿದಿರಲು
ಆತ್ಮಜ್ಯೋತಿಯ ಬೆಳಕ ಬೆಳಗುವ ಗುರುವಾಗಿ
ಭವಬಂಧವ ಬಿಡಿಸೆನ್ನ ಕೈಹಿಡಿದು
ನಡೆಸೆನ್ನನು

~ಚೇತನ ಭಾರ್ಗವ, ಬೆಂಗಳೂರು

ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ತನು ಮನಗಳ ಶುದ್ದಿಯಿಂದ... ಆಗುವುದು ಸಂಕಲ್ಪ ಸಿದ್ಧಿ

ನಮ್ಮ ದೇಹವು ಪಂಚಭೂತಗಳಾದ ಪೃಥ್ವಿ, ಆಕಾಶ, ವಾಯು,ಜಲ ಮತ್ತು ಅಗ್ನಿ ತತ್ವಗಳಿಂದ ಕೂಡಿದೆ. ಹುಟ್ಟಿದಾಗ ನಾವು ಪರಿಶುದ್ಧರಾಗಿಯೇ ಇದ್ದು ಜೀವಿತಾವಧಿಯಲ್ಲಿ ಸಿಟ್ಟು ಸೆಡವು ಕೋಪ ತಾಪ ದ್ವೇಷ ಅಸೂಯೆ, ಸುಖ ಸಂತೋಷ ನೆಮ್ಮದಿ ರಾಗ ಮುಂತಾದ ಎಲ್ಲಾ ರೀತಿಯ ಭಾವಗಳಿಗೆ ಸ್ಪಂದಿಸುತ್ತ ಬೆಳೆಯುತ್ತೇವೆ. ಒಟ್ಟಿನಲ್ಲಿ ಮನುಷ್ಯ ಜೀವಿ ಕಾರ್ಕೋಟಕ ವಿಷಕ್ಕಿಂತಲೂ ಕಡೆ ಎಂದು ಭಾವಿಸುವಂತೆ ತನ್ನ ಜೀವಿತಾವಧಿಯನ್ನು ಮನುಷ್ಯ ಕಳೆಯುತ್ತಾನೆ.

ಯಾವ ರೀತಿ ಅಗರ ಬತ್ತಿಯು ತನ್ನನ್ನು ತಾನು ಸುಟ್ಟು ಕೊಳ್ಳುವುದೋ ಹಾಗೆಯೇ ನಮ್ಮಲ್ಲಿ ಉಂಟಾಗುವ ದ್ವೇಷ, ಅಸೂಯೆ, ಮದ, ಮತ್ಸರಗಳು ನಮ್ಮನ್ನು ನಮಗರಿವಿಲ್ಲದೆಯೇ ಸುಟ್ಟು ಹಾಕುತ್ತವೆ. ಯಾವ ರೀತಿ ಕುದಿಯುವ ನೀರಿನಲ್ಲಿ ನಮ್ಮ ಮುಖ ನಮಗೆ ಕಾಣುವುದಿಲ್ಲವೋ ಹಾಗೆಯೇ ಸಿಟ್ಟಿನಲ್ಲಿದ್ದಾಗ ಮನುಷ್ಯ ತನ್ನ ತಪ್ಪನ್ನು ಅರಿತುಕೊಳ್ಳುವುದಿಲ್ಲ. ಶಾಂತವಾದ ಮತ್ತು ಶುದ್ಧವಾದ ಪರಿಸರದಲ್ಲಿ ತನ್ನ ತನು, ಮನಗಳನ್ನು ಶುದ್ಧೀಕರಿಸಿಕೊಳ್ಳಲು ಆ ಮೂಲಕ ತನ್ನನ್ನು ತಾನು ತಿದ್ದಿಕೊಳ್ಳಲು ಈ ಕೆಲವು ವಿಷಯಗಳು ಮನುಷ್ಯನಿಗೆ ಸಹಾಯಕವಾಗುತ್ತವೆ.

ನೀರಿನ ಸೇವನೆಯಿಂದ..... ದೇಹವು ಶುದ್ದವಾಗುತ್ತದೆ. ಹೆಚ್ಚು ನೀರು ಸೇವನೆ ಮಾಡುವುದರಿಂದ ಮನುಷ್ಯನ ದೇಹದಲ್ಲಿರುವ ಕಶ್ಮಲಗಳು ಮೂತ್ರ, ಮಲ ಮತ್ತು ಬೆವರಿನ ರೂಪದಲ್ಲಿ ಹೊರಹಾಕಲ್ಪಡುತ್ತದೆ. ಯೋಗಾಸನವನ್ನು ಮಾಡುವುದರಿಂದ ಮನುಷ್ಯ ತನ್ನ ಆಂತರಿಕ ಮತ್ತು ಮಾನಸಿಕ ಕಶ್ಮಲಗಳನ್ನು ಹೊರ ಹಾಕುತ್ತಾನೆ, ಇದರಿಂದ ಮನಸ್ಸು ಪ್ರಶಾಂತವಾಗಿ ಪ್ರಪುಲಿತವಾಗಿರುತ್ತದೆ. ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶವಿರುವುದಿಲ್ಲ.

ಪ್ರಾಣಾಯಾಮ ಮಾಡುವುದರಿಂದ.... ಉಸಿರಾಟ ಶುದ್ಧವಾಗುತ್ತದೆ. ಪ್ರತಿನಿತ್ಯ ಪ್ರಾಣಾಯಾಮದ ಅಭ್ಯಾಸ ಮಾಡುವುದು ಅನೇಕ ಮನೋ ದೈಹಿಕ ಕಾಯಿಲೆಗಳಿಗೆ ರಾಮಬಾಣದಂತೆ. ಕನಿಷ್ಠ ಮೂರು ನಿಮಿಷದಿಂದ ಗರಿಷ್ಠ ಮುಕ್ಕಾಲು ಗಂಟೆಯವರೆಗೆ ಪ್ರಾಣಾಯಾಮದ ಅಭ್ಯಾಸ ಮಾಡಿದಾಗ ಮನಸ್ಸು ಸಂಪೂರ್ಣ ನಿರಾಳವಾಗಿ ಜಂಜಡಗಳಿಂದ ಮುಕ್ತವಾಗುತ್ತದೆ. ಯಾವುದೇ ರೀತಿಯ ಆತಂಕ ಭಯಗಳಿಂದ ಮುಕ್ತವಾಗುತ್ತದೆ. ಸತತವಾಗಿ ಪ್ರಾಣಾಯಾಮದ ಅಭ್ಯಾಸ ಮಾಡುವುದರಿಂದ ವ್ಯಕ್ತಿಯು ಮಾನಸಿಕ ಒತ್ತಡ, ರಕ್ತದೊತ್ತಡ, ಹೃದ್ರೋಗ ಮುಂತಾದ ಕಾಯಿಲೆಗಳಿಂದ ಮುಕ್ತನಾಗುತ್ತಾನೆ.

ಧ್ಯಾನ ಮಾಡುವುದರಿಂದ ... ಮನಸ್ಸು ಶುದ್ದವಾಗುತ್ತದೆ. ಧ್ಯಾನವು ಮನಸ್ಸನ್ನು ಒಂದು ನಿಶ್ಚಿತ ಏಕಾಗ್ರತೆಯತ್ತ ಕೊಂಡೊಯ್ಯುವ ಸಾಧನ. ಸರಳವಾದ ಬಟ್ಟೆಯನ್ನು ತೊಟ್ಟು ಅನುಕೂಲಕರ ಆಸನದಲ್ಲಿ ಕುಳಿತು ಕತ್ತು, ಬೆನ್ನು ಮತ್ತು ತಲೆಯನ್ನು ನೇರವಾಗಿ ಇಟ್ಟುಕೊಂಡು ಕಣ್ಣು ಮುಚ್ಚಿ ಧ್ಯಾನಮಗ್ನ ರಾಗುವ ವ್ಯಕ್ತಿಗಳಿಗೆ ಅಪಾರವಾದ ಮಾನಸಿಕ ಶಾಂತಿ ಮತ್ತು ತನ್ಮೂಲಕ ಸ್ಥಿತಪ್ರಜ್ಞತೆ ಲಭಿಸುತ್ತದೆ. ಇಂದಿನ ಒತ್ತಡಭರಿತ ದೈನಂದಿನ ಜೀವನದಲ್ಲಿ ಧ್ಯಾನವನ್ನು ಅಭ್ಯಾಸ ಮಾಡುವುದು ಅತ್ಯಂತ ಸೂಕ್ತವಾದದ್ದು.

ಜ್ಞಾನ ಸಂಪಾದಿಸುವುದರಿಂದ.... ಜಾಣ್ಮೆ, ಉನ್ನತ ವಿಚಾರಧಾರೆಗಳ ಹರಿವು ಹೆಚ್ಚುತ್ತದೆ.ಜ್ಞಾನ ಸಂಪಾದನೆಯು ಎಲ್ಲಾ ಚಟುವಟಿಕೆಗಳಲ್ಲಿಯೇ ಮಹತ್ತರವಾದ ಕ್ರಿಯೆ. ತಿಳಿದವರಿಂದ, ಪಂಡಿತರಿಂದ, ಜ್ಞಾನಿಗಳಿಂದ ಪುಸ್ತಕಗಳಿಂದ ಅನುಭವಗಳಿಂದ ಸಂಪಾದಿಸುವ ಜ್ಞಾನ ನಮ್ಮ ಜೀವಿತದ ಕೊನೆಯವರೆಗೂ ನಮ್ಮೊಂದಿಗೆ ಇರುತ್ತದೆ ಯಾರು ಕದಿಯಲಾರದ ವಿದ್ಯೆ ಜ್ಞಾನ. ಅರಿವಿನ ಕೊರತೆ ನಮ್ಮ ಎಷ್ಟೋ ಸಮಸ್ಯೆಗಳಿಗೆ ಮೂಲ ಕಾರಣವಾಗಿ ರುತ್ತದೆ ಅಂತಹ ಸಮಯದಲ್ಲಿ ಸೂಕ್ತವಾದ ಪ್ರಾಪಂಚಿಕ ಜ್ಞಾನವು ಕೂಡ ಎಷ್ಟೋ ಸಮಸ್ಯೆಗಳನ್ನು ನಿವಾರಿಸುತ್ತದೆ. ಐಹಿಕ ಜೀವನದ ಎಷ್ಟೋ ತೊಂದರೆಗಳಿಗೆ ಆಧ್ಯಾತ್ಮದಲ್ಲಿ ಉತ್ತರವಿದೆ.

ಚಿಂತನ ಮಂಥನದಿಂದ..... ಅಜ್ಞಾನ ತೊಲಗಿ ಸುಜ್ಞಾನ ದೊರೆಯುತ್ತದೆ. ಸರಿ–ತಪ್ಪು, ಒಳಿತು–ಕೆಡುಕು, ಧರ್ಮ–ಅಧರ್ಮ ಇವುಗಳ ಕುರಿತು ಸೂಕ್ತವಾದ ಚಿಂತನೆ ಮಾಡಿ ವಿಚಾರವೆಂಬ ಕಡೆಗೋಲಿನಿಂದ ಮಂಥನ ಮಾಡಿ ಒಳ್ಳೆಯ ನಿರ್ಧಾರಕ್ಕೆ ಬರುವುದು ಕೂಡ ಅತ್ಯಂತ ಒಳ್ಳೆಯ ಕಾರ್ಯ. ಸರಿ ತಪ್ಪುಗಳ ಪರಾಮರ್ಶೆಯಿಂದ ಮನುಷ್ಯ ತಪ್ಪು ವಿಷಯಗಳಿಂದ ದೂರ ಸರಿದು ಒಳ್ಳೆಯ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಚಿಂತನೆ ಮಾಡಿದರೆ ಕಾರ್ಯಾಕಾರ್ಯಗಳ ಅರಿವು ಆಗುವುದಿಲ್ಲ. ಸರಿ ತಪ್ಪುಗಳ ಮೊಸರನ್ನು ಅರಿವು ಮತ್ತು ವಿಮರ್ಶೆಗಳ ಮಂಥನದ ಮೂಲಕ ಕಡೆದು ಉತ್ತಮ ವಿಚಾರಗಳ ಬೆಣ್ಣೆ ತೆಗೆದು ಉತ್ತಮ ವ್ಯಕ್ತಿತ್ವವೆಂಬ ಕಾಯಿಸಿದ ತುಪ್ಪವನ್ನು ಈ ಸಮಾಜಕ್ಕೆ ಬಡಿಸುವುದು ಸಮಾಜ ಜೀವಿಯಾಗಿ ನಮ್ಮ ಕರ್ತವ್ಯ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಸೇವೆ ಮಾಡುವುದರಿಂದ.... ಅಹಮ್ಮಿಗೆ ಸಂತೃಪ್ತಿ ದೊರೆಯುತ್ತದೆ.ಎಷ್ಟೋ ಜನ ಶ್ರೀಮಂತರು ಅಲ್ಲಲ್ಲಿ ನಡೆಯುವ ಪ್ರಸಾದ ಸೇವಾ ಕಾರ್ಯಗಳಲ್ಲಿ ಪ್ರವಾಹ, ಸುನಾಮಿ ಚಂಡಮಾರುತ ಮುಂತಾದ ಪ್ರಾಕೃತಿಕ ವಿಕೋಪಗಳಿಂದ



ಸಂತ್ರಸ್ತರಾದ ಜನರ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಹೀಗೆ ತೊಡಗಿಸಿಕೊಳ್ಳುವ ಮೂಲಕ ಅವರು ನಾನು ಶ್ರೀಮಂತ, ಉನ್ನತ ವರ್ಗದವನು ಎಲ್ಲರಿಗಿಂತ ಮೇಲು ಎಂಬ ಮೇಲರಿಮೆಯನ್ನು ತೊಡೆದು ಕೊಳ್ಳುತ್ತಾರೆ. ನಮ್ಮದೇ ಅಹಮ್ಮಿನ ಕೋಟೆಯೊಳಗೆ ಬಂಧಿಯಾದಾಗ ಇತರರ ಸಂಕಟಗಳು ನಮಗೆ ಕಾಣುವುದಿಲ್ಲ. ಆದರೆ ಸೇವೆಯ ಮೂಲಕ ಮನುಷ್ಯ ತನ್ನನ್ನು ಸಮಾಜಕ್ಕೆ ಅರ್ಪಿಸಿಕೊಳ್ಳುವ ಮನುಷ್ಯ ಪರಿಶುದ್ಧನಾಗುತ್ತಾನೆ. ಅಹಮ್ಮಿನ ಸಂತೃಪ್ತಿಗೆ ಕಾರಣವಾಗುತ್ತಾನೆ. ಎನಗಿಂತ ಕಿರಿಯರಿಲ್ಲ ಶಿವ ಭಕ್ತರಿಗಿಂತ ಹಿರಿಯರಿಲ್ಲ ಎಂಬ ಬಸವಣ್ಣನವರ ಉಕ್ತಿ ಸದಾ ಸರ್ವದ ನಮ್ಮ ಮನದಲ್ಲಿ ನೆಲೆ ಮಾಡಿರಬೇಕು.

ಮೌನದಿಂದ..... ನಾನು ಮತ್ತು ನನ್ನದು ಎಂಬ ವೈಯಕ್ತಿಕತೆ ಸ್ವಾರ್ಥತೆಯು ಶುದ್ಧವಾಗುತ್ತದೆ. ಪ್ರಶಾಂತವಾಗಿರುವ ಮೌನವೆಂಬ ಕೊಳದಲ್ಲಿ ಒಂದೇ ಸಮನೆ ನಿರರ್ಥಕವಾದ ಒಣ ಮಾತುಗಳನ್ನಾಡಿ ಬಗ್ಗಡ ಮಾಡುವುದಕ್ಕಿಂತ ಹಿತವಾದ ಮೌನ ಲೇಸು. ಮೌನವು ನಮಗೆ ಆತ್ಮ ಚಿಂತನೆಗೆ ದಾರಿ ಮಾಡಿಕೊಡುತ್ತದೆ. ಸರಿ ತಪ್ಪುಗಳ ವಿಮರ್ಶೆ, ಒಳಿತು ಕೆಡುಕುಗಳ ಪರಾಮರ್ಶೆಯನ್ನು ನಾವು ಮೌನಾನುಸಂಧಾನದಲ್ಲಿ ಪಡೆಯಬಹುದು. ಮೌನದ ಶಕ್ತಿ ಅಪಾರ. ಮಾತು ನಮ್ಮನ್ನು ಹಗುರಗೊಳಿಸಿದರೆ ಮೌನವು ನಮ್ಮನ್ನು ಆಂತರಿಕವಾಗಿ ಬಲಿಷ್ಠವಾಗಿಸುತ್ತದೆ. ಆದ್ದರಿಂದಲೇ ಋಷಿ ಮುನಿಗಳು, ಜ್ಞಾನಿಗಳು ಸದಾ ಮೌನದ ಮೊರೆ ಹೋಗುತ್ತಾರೆ. ಇನ್ನು ಹಲವು ಜನ ಸಂತರು ವಾರಕ್ಕೊಂದು ದಿನ, ಪ್ರತಿದಿನ ಸ್ನಾನ ಪೂಜೆ ಮುಗಿಯುವವರೆಗೆ ಮತ್ತೆ ಹಲವಾರು ದಿನಗಳ ಕಾಲದ ಮೌನಾನುಷ್ಠಾನವನ್ನು ಮಾಡುತ್ತಾರೆ. ಮೌನವು ನಮ್ಮ ಆಂತರಿಕ ಶಕ್ತಿಯನ್ನು ಹೆಚ್ಚಿಸಿ ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಗಟ್ಟಿಗೊಳಿಸುತ್ತದೆ.

ಉನ್ನತ ಆಲೋಚನೆಗಳಿಂದ..... ತಿನ್ನುವ ಆಹಾರ ಸಾತ್ವಿಕವಾಗುತ್ತದೆ. ಒಳ್ಳೆಯ ವಿಚಾರಗಳು, ಒಳ್ಳೆಯ ಕಾರ್ಯಗಳು, ಒಳ್ಳೆಯ ದುಡಿಮೆಯನ್ನು ಪ್ರೋತ್ಸಾಹಿಸುತ್ತದೆ. ಒಳ್ಳೆಯ ಮತ್ತು ಉನ್ನತ ವಿಚಾರಧಾರೆಗಳು ನಮ್ಮ ಆಹಾರದ ಮೇಲೂ ಪರಿಣಾಮ ಬೀರುತ್ತವೆ. ನಾವು ಆಹಾರವನ್ನು ತಯಾರಿಸುವಾಗ ಒಳ್ಳೆಯ ಆಲೋಚನೆ ಮಾಡಬೇಕು.ಸ್ವಚ್ಛ,ಶುದ್ಧವಾದ ಪ್ರಶಾಂತ ಪರಿಸರದಲ್ಲಿ ಅಡುಗೆಯನ್ನು ಮಾಡುವುದರ ಹಿಂದಿನ ಗುಟ್ಟು ಇದೇ. ವ್ಯವಹಾರವೇ ಮುಖ್ಯವಾಗಿರುವ ಹೋಟೆಲ್, ರೆಸ್ಟೋರೆಂಟ್ ಮುಂತಾದವುಗಳಲ್ಲಿ ನಾವು ಸೇವಿಸುವ ಆಹಾರ ತಾಮಸಿಕ ಮತ್ತು ರಾಜಸಿಕ ಗುಣವನ್ನು ಹೊಂದಿದ್ದು ಅಂತಹ ಆಹಾರವನ್ನು ಸೇವಿಸಿದಾಗ ನಮಗೆ ಅಜೀರ್ಣ, ಹುಳಿತೇಗು ಹೊಟ್ಟೆ ಉಬ್ಬರ ಮುಂತಾದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಆದರೆ ಸೇವೆಯೇ ಪ್ರಧಾನವಾಗಿರುವ ದೇವಸ್ಥಾನಗಳಲ್ಲಿ, ಮಠಗಳಲ್ಲಿ, ಸೇವಾ ಸದನಗಳಲ್ಲಿ ತಯಾರಿಸುವ ಆಹಾರಗಳಲ್ಲಿ ಸಾತ್ವಿಕ ಗುಣವೇ ತುಂಬಿದ್ದು ಮನಸ್ಸನ್ನು ಅರಳಿಸುವ ಮತ್ತು ಚೇತನ ಕೊಡುವ ಶಕ್ತಿ ಇರುತ್ತದೆ. ಒಳ್ಳೆಯ ಆಹಾರ ಸೇವನೆ ಮನಸ್ಸಿನಲ್ಲಿ ಸಕಾರಾತ್ಮಕ ಚಿಂತನೆಗಳನ್ನು ಬಡಿದೆಬ್ಬಿಸಿ ನಮ್ಮನ್ನು ಉತ್ತಮ ಕಾರ್ಯಗಳತ್ತ ಪ್ರೇರೇಪಿಸುತ್ತದೆ.

ದಾನ ಮಾಡುವುದರಿಂದ.... ಸಂಪತ್ತಿನ ಸದ್ವಿನಿಯೋಗವಾಗುವುದು. ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಎಂದು ಹೇಳುತ್ತಾರಲ್ಲವೇ. ಕೊಡುವುದರ ಮೂಲಕ ವ್ಯಕ್ತಿ ತನ್ನೊಳಗಿನ ಎಲ್ಲ ನಕಾರಾತ್ಮಕ ಚಿಂತನೆಗಳನ್ನು ಕಳೆದುಕೊಳ್ಳುತ್ತಾನೆ. ದಾನ ನೀಡುವ ಮೂಲಕ ತನ್ನಲ್ಲಿರುವ ಸಿಟ್ಟು ಸೆಡವು ಹಟಗಳನ್ನು ಕಳೆದುಕೊಳ್ಳುತ್ತಾನೆ. ಬೇಡುವ ಕೈಗಳಿಗಿಂತ ಕೊಡುವ ಕೈಗಳು ಶ್ರೇಷ್ಠ ಎಂದು ಹಿರಿಯರು ಹೇಳಿರುವುದು ಇದಕ್ಕೆ ಇರಬಹುದು. ದಾನಮಾಡುವ ಶಕ್ತಿಯನ್ನು ನೀಡಿರುವ ಆ ದೇವರಿಗೆ ಕೃತಾರ್ಥರಾಗಿರೋಣ.

ಪ್ರೀತಿ ಮತ್ತು ಸಮರ್ಪಣಾ ಭಾವದಿಂದ.... ಭಾವನೆಗಳು ಶುದ್ಧವಾಗುತ್ತವೆ. ವ್ಯಕ್ತಿಯನ್ನು ಆತನ ದೈಹಿಕ,ಮಾನಸಿಕ ಮತ್ತು ಇತರ ಒಳಿತು ಮತ್ತು ಕೆಡುಕುಗಳೊಂದಿಗೆ ಪ್ರೀತಿಸುವುದು ನಿಜವಾದ ಪ್ರೀತಿ. ಅಂತಹ ಪ್ರೀತಿಯಲ್ಲಿ ಯಾವುದೇ ಸ್ವಾರ್ಥ, ಆಕಾಂಕ್ಷೆಗಳು ಇರುವುದಿಲ್ಲ. ನೀನು ಹೀಗಿದ್ದರೆ ಮಾತ್ರ ನಾನು ನಿನ್ನನ್ನು ಪ್ರೀತಿಸಬಲ್ಲೆ ಎಂಬ ಶರತ್ತುಬದ್ಧ ಪ್ರೀತಿ ಸ್ವಾರ್ಥ ಎಂದೆನಿಸಿಕೊಳ್ಳುತ್ತದೆ. ಪ್ರೀತಿಗೆ ಬೇಕಾಗಿರುವುದು ಶುದ್ಧ ಅಂತಃಕರಣ ಮತ್ತು ಸಮರ್ಪಣಾ ಮನೋಭಾವ ಮಾತ್ರ. ಆದ್ದರಿಂದಲೇ ನಿಸ್ವಾರ್ಥವಾದ, ಕಲ್ಮಶವಿಲ್ಲದ ಮಾತೆಯ ಮಮತೆಯನ್ನು ಎಲ್ಲರೂ ಕೊಂಡಾಡುತ್ತಾರೆ. ಶುದ್ಧವಾದ ಪ್ರೀತಿ ವ್ಯಕ್ತಿಯ ಅಂದ ಚಂದಗಳನ್ನು ನೋಡದೆ ತನ್ನ ಎದುರಿರುವ ವ್ಯಕ್ತಿಯನ್ನು ಅವನಿರುವ ಹಾಗೆಯೇ ಅಂಗೀಕರಿಸುತ್ತದೆ.

ಮೇಲಿನ ದಶಗುಣಗಳನ್ನು ನಮ್ಮಲ್ಲಿ ನಾವು ಅಳವಡಿಸಿಕೊಳ್ಳುವ ಮೂಲಕ ನಮ್ಮಲ್ಲಿರುವ ಕೋಪ, ಅಸಹನೆ, ಉದ್ರೇಕ ಮುಂತಾದ ಗುಣಗಳನ್ನು ಕಳೆದುಕೊಂಡು ಪ್ರೀತಿ ವಿಶ್ವಾಸ ಭ್ರಾತೃತ್ವ, ಸಹನೆ, ಒಳ್ಳೆಯತನ ಮುಂತಾದ ಉನ್ನತ ಗುಣಗಳನ್ನು ಆವಾಹಿಸಿಕೊಳ್ಳುತ್ತಾ ವಿಶ್ವಮಾನವರಾಗುವ ಮೂಲಕ ರಾಷ್ಟ್ರಕವಿ ಕುವೆಂಪುರವರ ವಿಶ್ವಮಾನವ ಸಂದೇಶವನ್ನು ಜಗತ್ತಿನಲ್ಲಿ ಬಿತ್ತರಿಸೋಣ ಎಂಬ ಆಶಯದೊಂದಿಗೆ..

# ದಿಗ್ಗಜ ರಾಮೋಜಿರಾವ್‌ಗೆ ನುಡಿನಮನ

**ಹಂಪಿ ಟೈಮ್ಸ್ ಹೊಸಪೇಟೆ:** ಮಾಧ್ಯಮ ಲೋಕದ ದಿಗ್ಗಜ ರಾಮೋಜಿರಾಮ್ ಸಂಸ್ಥೆಯ ಸಂಸ್ಥಾಪಕ ರಾಮೋಜಿರಾವ್ ಅವರ ನಿಧನಕ್ಕೆ ವಿಜಯನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ವತಿಯಿಂದ ಭಾನುವಾರ ನುಡಿನಮನ ಸಲ್ಲಿಸಿತು.

ವಿಜಯನಗರ ಜಿಲ್ಲಾ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಸಂತಾಪ ಸಭೆಯಲ್ಲಿ ಅಗಲಿದ ಹಿರಿಯ ಚೇತನ ರಾಮೋಜಿ ರಾವ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಗೌರವ ಸಲ್ಲಿಸಲಾಯಿತು.



ಸಂಘದ ಜಿಲ್ಲಾಧ್ಯಕ್ಷ ಪಿ. ಸತ್ಯನಾರಾಯಣ ಹಾಗೂ ಪ್ರಧಾನ ಕಾರ್ಯದರ್ಶಿ ಕೆ. ಲಕ್ಷಣ್ ಅವರು ಮಾತನಾಡಿ, ರಾಮೋಜಿರಾವ್ ಅವರು ಲಕ್ಷಾಂತರ ಪತ್ರಕರ್ತರನ್ನು ಸೃಷ್ಟಿ ಮಾಡುವ ಮೂಲಕ ಪತ್ರಿಕೋದ್ಯಮಕ್ಕೆ ಹೊಸ ಭಾಷ್ಯ ಬರೆದವರು, ಹೈದರಾಬಾದ್‌ನಲ್ಲಿ ಇಡೀ ವಿಶ್ವದಲ್ಲಿಯೇ ದೊಡ್ಡದಾದ ಥೀಮ್ ಪಾರ್ಕ್, ಚಿತ್ರನಗರಿಯನ್ನು ನಿರ್ಮಾಣ ಮಾಡಿದವರು, ಇಂದು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಉತ್ತುಂಗದ ಸ್ಥಾನದಲ್ಲಿರುವ ಬಹುತೇಕ ಪತ್ರಕರ್ತರು, ರಾಮೋಜಿರಾವ್ ಅವರ ಸಂಸ್ಥೆಯಿಂದ ತರಬೇತಿ ಪಡೆದು ಹೆಸರು ಮಾಡಿರುವುದು ಹೆಮ್ಮೆಯ ಸಂಗತಿ. ಅವರ ಅಗಲಿಕೆಯಿಂದ ಭಾರತದ ಪತ್ರಿಕಾರಂಗ ಬಡವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾನಿಪ ಖಜಾಂಚಿ ಎಚ್. ವೆಂಕಟೇಶ್, ಪತ್ರಕರ್ತರಾದ ಅನಂತ್ ಜೋಶಿ, ಬಾಲಕೃಷ್ಣ, ರೇಖಾ ಪ್ರಕಾಶ್, ಅನೂಪ್ ಕುಮಾರ್, ಭೀಮಾನಾಯ್ಕ್, ಕೆಬಿ ಖವಾಸ್, ಸುರೇಶ್ ಚೌವ್ಹಾಣ್, ಜಯಪ್ಪ ರಾಥೋಡ್, ಸಂಜಯ್ ಕುಮಾರ್, ಪಾಂಡು ರಂಗ ಜಂತ್ಲಿ, ಪೂರ್ಣಿಮಾ ಇತರರಿದ್ದರು.



ಹೊಸಪೇಟೆಯಲ್ಲಿರುವ ಮಾರ್ಗದರ್ಶಿ ಚಿಟ್‌ಫಂಡ್ ಪ್ರೈವೆಟ್ ಲಿಮಿಟೆಡ್‌ನ ಬ್ರಾಂಚಿನಲ್ಲಿ ಸಂಸ್ಥೆಯ ಅಧ್ಯಕ್ಷ ಸಿ.ಎಚ್.ರಾಮೋಜಿ ರಾವ್ ಅವರ ಅಗಲಿಕೆ ಗೆ ಅವರ ಭಾವಚಿತ್ರಕ್ಕೆ ಸಿಬ್ಬಂದಿ ಪುಷ್ಪನಮನ ಸಲ್ಲಿಸಿದರು.
ಚಿಟ್ ಫಂಡ್ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ.
ಹೊಸಪೇಟೆ ಬ್ರಾಂಚಿನ ಮ್ಯಾನೇಜರ್ ಎಂ.ತಿಪ್ಪೇಸ್ವಾಮಿ ಮಾತನಾಡಿ, ಚಿಟ್ ಫಂಡ್ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಅತ್ಮಕ್ಕೆ ಶಾಂತಿ ದೊರೆಯಲಿ ಎಂದು ಪ್ರಾರ್ಥಿಸಿದರು.ಸಿಬ್ಬಂದಿ ಅಗಲಿದ ಆತ್ಮಕ್ಕೆ ಶಾಂತಿ ಕೋರಿದರು.


ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ

Organic Coconut & Banana, Moringa oleifera Available in best Price

98458 65204 ಮೃತ್ಯುಂಜಯನಗರ, ಹೊಸಪೇಟೆ


ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದಲ್ಲಿ ಅಂತರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ

# ಇಂದಿನ ಯುವಪೀಳಿಗೆ ಇತಿಹಾಸದ ಮಹತ್ವ ಅರಿಯಬೇಕು: ಡಿಸಿ ಮಿಶ್ರಾ




■ ಹಂಪಿ ಟೈಮ್ಸ್ ಬಳ್ಳಾರಿ

ಇತಿಹಾಸ ಮತ್ತು ವಸ್ತು ಸಂಗ್ರಹಾಲಯಗಳಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ವಸ್ತು ಸಂಗ್ರಹಾಲಯಗಳು ಮಾನವನು ತಾನು ಪ್ರಾಚೀನತೆಯಿಂದ ಆಧುನಿಕತೆಯೆಡೆಗೆ ಸಾಗಿಬಂದ ಪುರಾವೆ ತಿಳಿಸುತ್ತವೆ. ಹಾಗಾಗಿ ಇಂದಿನ ಪೀಳಿಗೆ ಇತಿಹಾಸದ ಮಹತ್ವ ಅರಿಯಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ನಗರದ ಡಾ.ರಾಜ್ ಕುಮಾರ್ ರಸ್ತೆಯ ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದ ಆವರಣದಲ್ಲಿ ಸೋಮವಾರ ಏರ್ಪಡಿಸಿದ್ದ ಅಂತರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಕಾರ್ಯಕ್ರಮ ದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿನ ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದ ಅಭಿವೃದ್ಧಿಗೆ ಜಿಲ್ಲಾಡಳಿತದಿಂದ ಅಗತ್ಯ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶಿಕ್ಷಣ ತಜ್ಞರು ಹಾಗೂ ವಿಮರ್ಶಕರಾದ ಗಣೇಶ್ ಎನ್. ದೇವಿ ಅವರು ಮಾತನಾಡಿ, ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದಲ್ಲಿ ಹಲವಾರು ಪುರಾತನ ಪಳೆಯುಳಿಕೆಗಳನ್ನು ಸಂಗ್ರಹಿಸಲಾಗಿದ್ದು, ಆಕರ್ಷಣೀಯ ವಸ್ತಿ ಸಂಗ್ರಹಾಲಯಗಳಲ್ಲಿ ಒಂದಾಗಿದೆ ಎಂದು ಹೇಳಿದರು.

ವೈಜ್ಞಾನಿಕತೆಯಿಂದ ನಾವೆಲ್ಲರೂ ಹಿಂದಿನ ಹಾದಿ ಸ್ಮರಿಸಬೇಕು. ತಂತ್ರಜ್ಞಾನ ಬದಲಾದರೂ ಪುರತಾನ ಸಂಸ್ಕೃತಿಯ ಜ್ಞಾನ ಬದಲಾಗುವುದಿಲ್ಲ, ಈ ಭಾಗದಿಂದ ಯುವ ಸಂಶೋಧನಾಕಾರರು ರಾಜ್ಯವ್ಯಾಪಿಯಲ್ಲಿ ಹೊರಹೊಮ್ಮಬೇಕು ಎಂದು ಆಶಿಸಿದರು. ಈಗಿನ ಸಂದರ್ಭದಲ್ಲಿ ವಸ್ತುಸಂಗ್ರಹಾಲಯಗಳ ಅಭಿವೃದ್ಧಿಗೆ ಕಾಯಕಲ್ಪ ಬೇಕಿದೆ ಎಂದು ಅಭಿಪ್ರಾಯಪಟ್ಟರು.

ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದ ಗೌರವ ನಿರ್ದೇಶಕ ಪ್ರೊ. ರವಿ ಕೋರಿ ಶೆಟ್ಟರ್ ಅವರು ಮಾತನಾಡಿ, ಇತಿಹಾಸದ ಹೆಜ್ಜೆ ಗುರುತುಗಳನ್ನು ಹಿಡಿದಿಟ್ಟುಕೊಳ್ಳುವುದು ವಸ್ತು ಸಂಗ್ರಹಾಲಯಗಳ ಕೆಲಸವಾಗಿದ್ದು, ಅದರಲ್ಲಿ ವೈದ್ಯಕೀಯ ಕ್ಷೇತ್ರವು ತನ್ನದೇ ಆದ ಸಹಭಾಗಿತ್ವನ್ನು ಹೊಂದಿದೆ. ವಾಸ್ತವವಾಗಿ ಪ್ರಾಚೀನ ಶಿಲಾಯುಗ ಮತ್ತು ನವಶಿಲಾಯುಗಗಳಿಗೆ ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪುರಾತತ್ವ ವಸ್ತುಸಂಗ್ರಹಾಲಯವು ಶಿಲಾಯುಗದ ಉಪಕರಣಗಳ ವಿಶಿಷ್ಟವಾದ ಇತಿಹಾಸ ಪೂರ್ವ ಮಾಹಿತಿ ಒಳಗೊಂಡಿದೆ. ಶಿಲಾಯುಗದ ಮೇಲೆ ಕೇಂದ್ರೀಕೃತವಾಗಿರುವ ಏಕೈಕ ವಸ್ತು ಸಂಗ್ರಹಾಲಯ, ರಾಬರ್ಟ್ ಬ್ರೂಸ್ ಫೂಟ್ ಸಂಗನಕಲ್ಲು ಪುರಾತತ್ವ ವಸ್ತು ಸಂಗ್ರಹಾಲಯವು ಇದಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಎಲ್ಲಾ ಗಣ್ಯರು ದಿ.ಪ್ರೊ.ಪಿ.ಸತ್ಯನಾರಾಯಣ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ರಾಬರ್ಟ್ ಬ್ರೂಸ್ ಫುಟ್ ಸಂಗನಕಲ್ಲು ಪ್ರಾಕ್ತನ ವಸ್ತು ಸಂಗ್ರಹಾಲಯದ ಸದಸ್ಯ ಸಂತೋಷ್ ಮಾರ್ಟಿನ್, ತಾಂತ್ರಿಕ ಸಹಾಯಕರಾದ ಗೌರಿ, ಬಳ್ಳಾರಿ ಹೆರಿಟೇಜ್ ಫೌಂಡೇಶನ್‌ನ ಟ್ರಸ್ಟಿ ಟಿ.ಜಿ.ವಿಠ್ಠಲ್ ಸೇರಿದಂತೆ ಇನ್ನಿತರೆ ಗಣ್ಯರು ಮತ್ತು ವಿದ್ಯಾರ್ಥಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ತೋಟಗಾರಿಕೆ ಇಲಾಖೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ತೋಟಗಾರಿಕೆ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ರೈತ ಫಲಾನುಭವಿಗಳಿಗೆ 2024-25ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ಸಹಾಯಧನ ಪಡೆಯಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಅವರು ತಿಳಿಸಿದ್ದಾರೆ.

ಬಳ್ಳಾರಿ, ಕುರುಗೋಡು, ಕಂಪ್ಲಿ, ಸಂಡೂರು ಮತ್ತು ಸಿರುಗುಪ್ಪ ತಾಲ್ಲೂಕುಗಳಲ್ಲಿ ರೈತರ ಕಲ್ಯಾಣಕ್ಕಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಮೇಗಾ ಮೈಕ್ರೊ ಆಗ್ರಿ-ಹಾರ್ಟಿ ಸಿಸ್ಟಮ್ ಕಾರ್ಯಕ್ರಮದಡಿ ಅನುಷ್ಠಾನಗೊಳಿಸಲಾಗುತ್ತಿರುವ ತೋಟಗಾರಿಕೆ ಬೆಳೆಗಳಾದ ಮಾವು, ಸೀತಾಫಲ್, ಸೀಬೆ, ಗೇರು, ಹುಣಸೆ, ನೇರಳೆ ಮತ್ತು ಎಳೆನೀರು ತೆಂಗಿನಕಾಯಿ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮ, ಬೈಯೋಡೈಜಿಸ್ಟರ್, ಅರಣ್ಯ ಬೆಳೆಗಳಾದ ಸಾಗುವಾನಿ, ಮಹಾಗನಿ ಮತ್ತು ಶ್ರೀಗಂಧ ಬೆಳೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ತೋಟಗಾರಿಕೆ ರೈತ ಫಲಾನುಭವಿಗಳು ಆಯಾ ತಾಲ್ಲೂಕು, ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಈ ಯೋಜನೆಗಳ ಮಾಹಿತಿ ಪಡೆದು ಅರ್ಜಿ ಸಲ್ಲಿಸಿ ಯೋಜನೆಯ ಸೌಲಭ್ಯಗಳ ಸದುಪಯೋಗ ಪಡೆದು ಕೊಳ್ಳಬೇಕು ಎಂದು ತಿಳಿಸಿದ್ದಾರೆ.

## ಲ್ಯಾಟರಲ್ ಎಂಟ್ರಿ ಸ್ಕೀಂ ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿಯ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ 2024-25 ನೇ ಸಾಲಿನ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ 2 ನೇ ವರ್ಷ ಮತ್ತು 3 ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಟಿಐ ಮತ್ತು ದ್ವಿತೀಯ ಪಿಯುಸಿ (ವಿಜ್ಞಾನ/ತಾಂತ್ರಿಕ ವಿಷಯಗಳಲ್ಲಿ) ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.

ಅಭ್ಯರ್ಥಿಗಳು ಜೂನ್ 25 ರವರೆಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಜೂ.26 ರಂದು ಸಂಸ್ಥೆಯಲ್ಲಿ ಪ್ರಕಟಿಸಲಾಗುವುದು. ಜೂ.27 ಮತ್ತು 28 ರಂದು ಪ್ರವೇಶ ಪ್ರಕ್ರಿಯೆ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಮೊದಲನೇ ಗೇಟ್ ಹತ್ತಿರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್‌ನ ಪ್ರಾಂಶುಪಾಲರ ಕಚೇರಿ ಅಥವಾ ದೂ.08392-242228 ಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

## ಬರದ ಬಳಿಕ ಬೀಜ ಗೊಬ್ಬರ ಬೆಲೆ ಏರಿಕೆ ಬರೆ
### ರಾಜ್ಯ ಸರ್ಕಾರದ ವಿರುದ್ಧ ಶಾಸಕ ನೇಮಿರಾಜ್‌ನಾಯ್ಕ್ ಆಕ್ರೋಶ



ಬೀಜ ಮತ್ತು ರಸಗೊಬ್ಬರಗಳ ಬೆಲೆ ಏರಿಕೆಮಾಡಿ ರೈತರಿಗೆ ಬರೆ ಹಾಕಿರುವುದು ಖಂಡನೀಯ. ಬೀಜ, ಗೊಬ್ಬರ ಬೆಲೆ ಕೂಡಲೇ ಇಳಿಕೆ ಮಾಡಬೇಕು.
**ಕೆ.ನೇಮಿರಾಜ್‌ನಾಯ್ಕ್, ಶಾಸಕ**

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ:

ಬರಗಾಲ ಬಳಿಕ ಈಗ ಬೀಜ ಗೊಬ್ಬರಗಳ ಬೆಲೆ ಏರಿಕೆಮಾಡಿ, ರೈತರಿಗೆ ಮತ್ತೊಂದು ಬರೆಹಾಕಿರುವ ರಾಜ್ಯ ಸರ್ಕಾರದ ಕೊಡುಗೆ ಇದಾಗಿದೆ ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ರಾಜ್ಯ ಸರ್ಕಾರಕ್ಕೆ ಲೇವಡಿ ಮಾಡಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ರೈತ ಸಂಪರ್ಕ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ, ರಿಯಾಯಿತಿ ಧರದಲ್ಲಿ ಬಿತ್ತನೆಯ ಬೀಜ ವಿತರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಕಳೆದ ವರ್ಷ ಪ್ರಕೃತಿಯಲ್ಲಿ ಮಳೆ ಸಂಪೂರ್ಣ ಕೈಕೊಟ್ಟು, ರೈತರನ್ನು ಸಂಕಷ್ಟಕ್ಕೀಡುಮಾಡಿತ್ತು. ಈ ವರ್ಷ ಮುಂಗಾರು ಆರಂಭವಾದ ಸಂದರ್ಭದಲ್ಲಿ ಬೀಜ ಮತ್ತು ರಸಗೊಬ್ಬರಗಳ ಬೆಲೆ ಏರಿಕೆಮಾಡಿ ಮತ್ತೊಂದು ಬರೆ ಹಾಕಿರುವುದು ಖಂಡನೀಯ. ವಿವಿಧ ಉಚಿತ ಕೆಲ ಅವೈಜ್ಞಾನಿಕ ಕೊಡುಗೆಗಳನ್ನು ನೀಡಿದ ಪರಿಣಾಮ ಇಂದು ರೈತರ ಮೇಲೆ ಹೊರೆಮಾಡಿದ ಸರ್ಕಾರ ಕೂಡಲೆ ಬೀಜ ಗೊಬ್ಬರಗಳ ಬೆಲೆ ಇಳಿಕೆಮಾಡಬೇಕು ಎಂದು ಆಗ್ರಹಿಸಿದರು.

ಈಗ ನಡೆದಿರುವ ವಾಲ್ಮೀಕಿ ನಿಗಮದ ಹಗರಣದಲ್ಲಿ ಇನ್ನಷ್ಟು ಪ್ರತಿನಿಧಿಗಳು ಸಿಲುಕಿದ್ದಾರೆ. ತನಿಖೆಯಿಂದ ಹೊರಬರಬೇಕಾಗಿದೆ. ಅಲ್ಲದೆ, ಇಂತಹದೇ ಭ್ರಷ್ಟಾಡಳಿತದಲ್ಲಿ ರಾಜ್ಯ ಸರ್ಕಾರದ ಕೆಲವರು ಸಿಲುಕಲಿದ್ದಾರೆ ಎಂದು ಆರೋಪಿಸಿದರು.

ತಾಲೂಕಿನ ಪ್ರಮುಖ ಸಮಸ್ಯೆಯಾದ ಮಾಲವಿ ಜಲಾಶಯಗಳ ಕ್ರಸ್‌ಗೇಟ್‌ಗಳ ದುರಸ್ಥಿಗೆ 4 ಕೋಟಿಗೂ ಅಧಿಕ ಮೊತ್ತ ಇದ್ದು, ಈಗಾಗಲೇ ಟೆಂಡರ್ ಕರೆಯಲಾಗಿದೆ. ಶೀಘ್ರದಲ್ಲೇ ಅವುಗಳ ದುರಸ್ಥಿಕಾರ್ಯ ಆರಂಭವಾಗಲಿದೆ ಎಂದರು.

ಈ ವೇಳೆ ಪುರಸಭೆ ಸದಸ್ಯರಾದ ಬಿ.ಗಂಗಣ್ಣ, ದೀಪಕ್ ಕಠಾರೆ, ಜೆ.ಡಿ.ಎಸ್‌ಅಧ್ಯಕ್ಷ ವೈ. ಮಲ್ಲಿಕಾರ್ಜುನ, ಮುಖಂಡರಾದ ಸುಭಾಷ್ ಕಿನ್ನಾಳ, ಅಂಬಾಡಿ ಮಹೇಶ್, ರಾಜಲಿಂಗಪ್ಪ, ಹನಸಿ ಸಿದ್ದೇಶ್, ಹೋಟಲ್ ಸಿದ್ದರಾಜ್, ನವ ಕರ್ನಾಟಕ ನಾಡ ರಕ್ಷಣ ವೇದಿಕೆ ಜಿಲ್ಲಾಧ್ಯಕ್ಷ ಗಣೇಶ, ಶಾಸಕರ ಆಪ್ತ ಸಹಾಯಕರಾದ ದೊಡ್ಡಬಸಪ್ಪರೆಡ್ಡಿ ಇತರರಿದ್ದರು.

# ವಿಜ್ಞಾನ

## ಹಲ್ಲಿಗಳ ಬಾಲ ತುಂಡಾದರೂ ಪುನಃ ಏಕೆ ಬೆಳೆಯುತ್ತದೆ?

■ ಆರ್.ಬಿ.ಗುರುಬಸವರಾಜ

ಓದುತ್ತಾ ಕುಳಿತದ್ದ ರಮೇಶನ ಕಾಲ ಬಳಿ ಹಲ್ಲಿಯ ಬಾಲವೊಂದು ತುಂಡಾಗಿ ಬಿತ್ತು. "ಅಯ್ಯೋ ಪಾಪ!" ಎಂದ. ತಕ್ಷಣವೇ 'ಏನಾಯ್ತು?' ಎಂದಳು ಅಮ್ಮ. "ಪಾಪ ಹಲ್ಲಿಯ ಬಾಲ ತುಂಡಾಗಿ ಬಿತ್ತು" ಎಂದ. ಸ್ವಲ್ಪ ಸಮಯದವರೆಗೂ ವಿಲವಿಲನೇ ಒದ್ದಾಡಿದ ಬಾಲವನ್ನು ಪೇಪರ್‌ನಲ್ಲಿಟ್ಟುಕೊಂಡು ಬಿಸಾಡಿದ. ಬಾಲ ಕಳೆದುಕೊಂಡ ಹಲ್ಲಿಯನ್ನು ನೋಡಿ ತಾಯಿಯ ಕರುಳು ಚುರುಕ್ ಎಂದಿತು. 'ಪಾಪ ಅದೆಷ್ಟು ನೋವಾಯಿತೋ ಏನೋ ಅದಕ್ಕೆ?' ಎಂದಳು. "ಅಯ್ಯೋ ಅದಕ್ಯಾಕೆ ನೀನು ಇಷ್ಟು ಬೇಜಾರು ಮಾಡಿಕೋತೀಯ ಬಿಡಮ್ಮ, ಬಾಲ ಮತ್ತೆ ಬೆಳೆಯುತ್ತೆ" ಎಂದ ರಮೇಶ. 'ಹಲ್ಲಿಗಳ ಬಾಲ ತುಂಡಾದರೂ ಪುನಃ ಏಕೆ ಬೆಳೆಯುತ್ತದೆ?' ಎಂದಳು ತಾಯಿ. ತಾಯಿಯ ಪ್ರಶ್ನೆಗೆ ರಮೇಶ ಉತ್ತರಿಸತೊಡಗಿದ.



ಹಲ್ಲಿಗಳು ತಮ್ಮ ಬಾಲಗಳನ್ನು ರಕ್ಷಣಾ ಕಾರ್ಯವಿಧಾನವಾಗಿ ಪುನರುತ್ಪಾದಿಸುವ ಸಾಮರ್ಥ್ಯವನ್ನು ಹೊಂದಿವೆ. ಪರಭಕ್ಷಕವು ಹಲ್ಲಿಯ ಬಾಲವನ್ನು ಹಿಡಿದಾಗ, ಅಲ್ಲಿಂದ ತಪ್ಪಿಸಿಕೊಳ್ಳಲು ಹಲ್ಲಿಯು ತನ್ನ ಬಾಲವನ್ನು ಕಳಚುತ್ತದೆ. ಇದನ್ನು ಆಟೋಟಮಿ ಎಂದು ಕರೆಯಲಾಗುತ್ತದೆ.

ತುಂಡಾದ ಬಾಲದ ಸ್ಥಳದಲ್ಲಾದ ಗಾಯವನ್ನು ಗುಣಪಡಿಸಲು ಹಲ್ಲಿಯು ಬಾಲವನ್ನು ಪುನರುತ್ಪಾದಿಸಲು ಪ್ರಾರಂಭಿಸುತ್ತದೆ. ಹಲ್ಲಿಯ ಬಾಲದಲ್ಲಿ ಬ್ಲಾಸ್ಟೆಮಲ್ ಕೋಶಗಳೆಂದು ಕರೆಯಲ್ಪಡುವ ವಿಶೇಷ ಕೋಶಗಳ ಉಪಸ್ಥಿತಿಯಿಂದಾಗಿ ಇದು ಸಾಧ್ಯ. ಈ ಕೋಶಗಳು ಸಕ್ರಿಯಗೊಳ್ಳುತ್ತವೆ ಮತ್ತು ವೇಗವಾಗಿ ವಿಭಜಿಸಲು ಪ್ರಾರಂಭಿಸುತ್ತವೆ. ಗಾಯದ ಸ್ಥಳದಲ್ಲಿ ಬ್ಲಾಸ್ಟೆಮಾ ಎಂಬ ರಚನೆಯನ್ನು ರೂಪಿಸುತ್ತವೆ. ಬ್ಲಾಸ್ಟೆಮಾವು ಸ್ನಾಯು, ಮೂಳೆ ಮತ್ತು ಚರ್ಮದಂತಹ ವಿವಿಧ ರೀತಿಯ ಅಂಗಾಂಶಗಳಾಗಿ ಪ್ರತ್ಯೇಕಿಸಬಹುದಾದ ಕೋಶಗಳನ್ನು ಹೊಂದಿರುತ್ತದೆ. ಅಂತಿಮವಾಗಿ ಹೊಸ ಬಾಲ ಬೆಳೆಯುತ್ತದೆ.

ಹಲ್ಲಿಗಳು ತಮ್ಮ ಬಾಲಗಳನ್ನು ಪುನರುತ್ಪಾದಿಸಬಹುದಾದರೂ, ಹೊಸ ಬಾಲವು ಮೂಲದಂತೆ ನಿಖರವಾಗಿರುವುದಿಲ್ಲ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ. ಇದು ಗಾತ್ರದಲ್ಲಿ ಚಿಕ್ಕದಾಗಿರಬಹುದು, ತೆಳ್ಳಗಿರಬಹುದು ಅಥವಾ ಸ್ವಲ್ಪ ವಿಭಿನ್ನ ಆಕಾರದಲ್ಲಿರಬಹುದು. ಮೂಲ ಬಾಲದಂತೆ ಚಲನಶೀಲತೆ ಅಥವಾ ಸೂಕ್ಷ್ಮತೆಯನ್ನು ಹೊಂದಿರುವುದಿಲ್ಲ. ಅಲ್ಲದೇ ಬಾಲವನ್ನು ಮತ್ತೆ ಬೆಳೆಸಲು ಹಲ್ಲಿಗೆ ಸಾಕಷ್ಟು ಶಕ್ತಿ ಮತ್ತು ಸಂಪನ್ಮೂಲಗಳು ಬೇಕಾಗುತ್ತವೆ. ಹಾಗಾಗಿ ಇದು ವೇಗವಾಗಿ ಅಥವಾ ಸುಲಭವಾಗಿ ಸಂಭವಿಸುವ ಸಂಗತಿಯಲ್ಲ.

## ದಾಳಿಂಬೆ ಬೆಳೆಗಿದೆ ಅಗ್ರಸ್ಥಾನ

ಮೊದಲ ಪುಟದಿಂದ

ಉತ್ತಮವಾದ ಸಲಹೆ ನೀಡುವ ಮೂಲಕ ರೈತರ ಹಿತ ಕಾಪಾಡಬೇಕು ಎಂದು ಕರೆ ನೀಡಿದರು.

ಡಾ.ಸುನಿಲ್ ಮಾತನಾಡಿ, ದಾಳಿಂಬೆ ಬೆಳೆಯು ಇಂದು ದೇಶದ ಪ್ರಮುಖ ಬೆಳೆಯಾಗುತ್ತಿದ್ದು, ರೈತರ ಆರ್ಥಿಕ ಬದಲಾವಣೆಗಾಗಿ ಈ ಬೆಳೆ ಸಹಕಾರಿಯಾಗಿದೆ. ಮಣ್ಣಿನ ಪರೀಕ್ಷೆ, ತೇವಾಂಶ ಹಾಗೂ ಉಷ್ಣಾಂಶ ಸೇರಿದಂತೆ ನೀರುಣಿಸುವ ಡ್ರಿಪ್ ಮಾಹಿತಿ ಸಂಪೂರ್ಣವಾಗಿ ಪಡೆದಿರಬೇಕು ಎಂದರು.

ವಿಜ್ಞಾನಿ ಡಾ.ಮಂಜುನಾಥ, ಸಸ್ಯ ತಜ್ಞ ಡಾ.ರಾಘವೇಂದ್ರ ಆಚಾರ್, ಸಂಘದ ಉಪಾಧ್ಯಕ್ಷ ನಾಗರಾಜ್, ಪ್ರಗತಿಪರ ರೈತ ಬಿ.ಜಿ.ಹಳ್ಳಿಯ ಹೊಳಗುಂದಿ ಶೇಖರಪ್ಪ, ಲಕ್ಷ್ಮೇಶ, ಶಿವಪ್ಪ, ರಾಷ್ಟ್ರೋತ್ಥಾನ ಶಾಲೆಯ ಕಾರ್ಯದರ್ಶಿ ಬಸವನಗೌಡ್ರು, ಅನೇಕ ಕಂಪನಿಗಳ ಪ್ರತಿನಿಧಿಗಳು, ತಾಲೂಕಿನ ಪ್ರಗತಿಪರ ರೈತರು ಪಾಲ್ಗೊಂಡಿದ್ದರು.

ದಾಳಿಂಬೆ ಬೆಳೆಗಾರರ ಸಂಘದ ಅಧ್ಯಕ್ಷ ಮುನಿಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯ ಶಿವಪ್ರಸಾದ್ ಸ್ವಾಗತಿಸಿದರು. ಶಿವಪ್ಪ ಹಾಗೂ ಅಂಬರೀಶ ನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ದಾಳಿಬೆ ಬೆಳೆಯುವಾಗ ರೈತರಿಗೆ ಅನುಕೂಲವಾಗುವಂತ ಫಸಲ್ ಟೆಕ್, ಕೃಷಿಟೆಕ್, ಸುದೀರ್ ಸೇರಿದಂತೆ ಇತರೆ ಕಂಪನಿಗಳ ತಂತ್ರಜ್ಞಾನಗಳ ಅಳವಡಿಕೆ ಉತ್ಪನ್ನಗಳು, ಪರಿಕರಗಳು ಪ್ರದರ್ಶನಗೊಂಡು ರೈತರ ಗಮನ ಸೆಳೆದಿದ್ದವು.


OM ENTERPRISES
Disposible Items Production & Wholesale

Available: Paper Tea Cup - Water Cup - Juice Cup - Bowl & Plate Etc.
M:94487 17137, 83109 88292
Chitrakeri, Hosapete-583201, Vijayanagara Dist.



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join for to Get Daily E-paper


## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**11-06-2024 - ಮಂಗಳವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ವ್ಯಾಘಾತ |
| ಕರಣ | : ಬಾಳವ |
| ಸೂರ್ಯೋದಯ | : 05:41:53 |
| ಸೂರ್ಯಾಸ್ತ | : 19:10:36 |
| ರಾಹು | : 15:49-17:30 |
| ಯಮಘಂಡ | : 09:04-10:46 |
| ಗುಳಿಕ | : 12:27-14:08 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 10-06-2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1580.23 ಅಡಿ |
| ಒಳ ಹರಿವು | 4817 ಕ್ಯುಸೆಕ್ |
| ಹೊರ ಹರಿವು | 10 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.581 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.07 ಅಡಿ |
| ಒಳ ಹರಿವು | 280 ಕ್ಯುಸೆಕ್ |
| ಹೊರ ಹರಿವು | 246 ಕ್ಯುಸೆಕ್ |
| ಸಾಮರ್ಥ್ಯ | 5.013 ಟಿಎಂಸಿ |

## ವಿವಿಧ ಹುದ್ದೆಗಳ ಆಯ್ಕೆಪಟ್ಟಿಗೆ ಆಕ್ಷೇಪಣೆ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನದ ಎನ್‌ಎಂಹೆಚ್‌ಪಿ, ಇ-ಆಸ್ಪಿಟಲ್ ಕಾರ್ಯಕ್ರಮ ಗಳಡಿಯಲ್ಲಿ ಆರೋಗ್ಯ ಇಲಾಖೆಯಿಂದ ವಿಜಯನಗರ ಜಿಲ್ಲೆಯ ಎರಡು ಹುದ್ದೆಗಳ ಆಯ್ಕೆಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಲಾಗಿದೆ.

ಮನೋಸಾಮಾಜಿಕ ಕಾರ್ಯಕರ್ತರು ಒಂದು ಹುದ್ದೆ, ಪ್ರೋಗ್ರಾಮ್ ಮ್ಯಾನೇಜರ್ ಒಂದು ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ ಮನೋಸಾಮಾಜಿಕ ಕಾರ್ಯಕರ್ತರ ಮತ್ತು ಪ್ರೋಗ್ರಾಮ್ ಮ್ಯಾನೇಜರ್ ಹುದ್ದೆಗಳ ನೇಮಕಾತಿಯ ಒಟ್ಟು ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ, ಕಾಯ್ದಿರಿಸಿದ ಆಯ್ಕೆ ಪಟ್ಟಿ, ತಿರಸ್ಕರಿಸಿದ ಪಟ್ಟಿಗಳನ್ನು ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರು ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಂದ ಜೂನ್ 17ರ ಸಂಜೆ 5 ಗಂಟೆಯೊಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಕುಷ್ಠರೋಗ ನಿರ್ಮೂಲಣಾಧಿಕಾರಿಗಳು ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA